# ಹಂಪಿ ಟೈಮ್ಸ್




ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:03 • ಸಂಚಿಕೆ: 02 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 22.06.2025 • ಭಾನುವಾರ • ಪುಟ:04 • ಬೆಲೆ:2
Volume:03 • Issue: 02 • PRGI No:KARKAN/2023/88055 • VIJAYANAGARA • 22.06.2025 • Sunday • Page:04 • Rs:2







## ಮೈಕ್ರೋ ನ್ಯೂಸ್

### ಜೆಸ್ಕಾಂ ಗ್ರಾಹಕರ ಸಂವಾದ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ನಗರ ವಿಭಾಗ ಮತ್ತು ಹಗರಿಬೊಮ್ಮನಹಳ್ಳಿ ಗ್ರಾಮೀಣ ವಿಭಾಗೀಯ ಕಚೇರಿಗಳಲ್ಲಿ ಜೂ.23 ರಂದು ಮಧ್ಯಾಹ್ನ 3 ಗಂಟೆಗೆ ಹೊಸಪೇಟೆ ಜೆಸ್ಕಾಂ ಕಾರ್ಯ ಮತ್ತು ಪಾಲನಾ ವೃತ್ತ ಕಚೇರಿಯ ಅಧಿಕ್ಷಕ ಅಭಿಯಂತರರ ಅಧ್ಯಕ್ಷತೆಯಲ್ಲಿ ಗ್ರಾಹಕರ ಸಂವಾಧ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಾರ್ಯ ಮತ್ತು ಪಾಲನಾ ನಗರ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರ ಕೆ. ಸತೀಶ್ ತಿಳಿಸಿದ್ದಾರೆ. ಹೊಸಪೇಟೆ ನಗರ ಹಾಗೂ ಹಗರಿಬೊಮ್ಮನಹಳ್ಳಿ ಗ್ರಾಮೀಣ ಪ್ರದೇಶದ ಗ್ರಾಹಕರು ಮತ್ತು ಸಾರ್ವಜನಿಕರು ಸಭೆಗೆ ಭಾಗವಹಿಸಿ ತಮ್ಮ ಕುಂದು ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು.

### ಜೂ.27 ನೀರಾವರಿ ಸಲಹಾ ಸಮಿತಿ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**

ತುಂಗಾಭದ್ರಾ ಯೋಜನೆಯ ಮತ್ತು ವಿಜಯನಗರ ಕಾಲುವೆಗಳ ಮುಂಗಾರು ಹಂಗಾಮಿಗೆ ಲಭ್ಯವಾಗುವ ನೀರನ್ನು ಒದಗಿಸುವ ಕುರಿತು ಚರ್ಚಿಸಲು ಜೂ.27 ರಂದು ಮಧ್ಯಾಹ್ನ 03 ಗಂಟೆಗೆ ಬೆಂಗಳೂರಿನ ವಿಧಾನಸೌಧದ 3 ನೇ ಮಹಡಿಯ ಕೊಠಡಿ ಸಂಖ್ಯೆ.334 ರ ಸಮ್ಮೇಳನ ಸಭಾಂಗಣದಲ್ಲಿ 124 ನೇ ನೀರಾವರಿ ಸಲಹಾ ಸಮಿತಿ ಸಭೆ ಆಯೋಜಿಸಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಮತ್ತು ನೀರಾವರಿ ಸಲಹಾ ಸಮಿತಿಯ ಅಧ್ಯಕ್ಷರೂ ಆದ ಶಿವರಾಜ ಎಸ್.ತಂಗಡಗಿ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ತುಂಗಾಭದ್ರಾ ಯೋಜನೆ ಮತ್ತು ವಿಜಯನಗರ ಕಾಲುವೆಗಳ ನೀರಾವರಿ ಸಲಹಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.

# ಹಂಪಿ ಟೈಮ್ಸ್ ಓದುಗರ ಸಂಭ್ರಮ

# ಸಮಾಜಮುಖಿ ಪತ್ರಿಕೋದ್ಯಮಕ್ಕೆ ಬದ್ಧ

## ಹಂಪಿ ಟೈಮ್ಸ್ ಸಂಪಾದಕ ಬಸಾಪುರ ಬಸವರಾಜ ಹೇಳಿಕೆ | ಎರಡನೇ ವಾರ್ಷಿಕೋತ್ಸವದಲ್ಲಿ ಓದುಗರು ಹರ್ಷ



**ಹಂಪಿ ಟೈಮ್ಸ್ ಹೊಸಪೇಟೆ**

ಓದುಗರ ನೆಚ್ಚಿನ ಪತ್ರಿಕೆ 'ಹಂಪಿಟೈಮ್ಸ್' ತನ್ನ ಎರಡನೇ ವಾರ್ಷಿಕೋತ್ಸವವನ್ನು ಶನಿವಾರ ನಗರದ ವಾಲ್ಮೀಕಿ ಸರ್ಕಲ್ ಬಳಿ ಇರುವ ಪತ್ರಿಕಾ ಕಾರ್ಯಾಲಯದಲ್ಲಿ ಹಂಪಿ ಶ್ರೀ ವಿರೂಪಾಕ್ಷೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಭಕ್ತಿಪೂರ್ವಕವಾಗಿ ಆಚರಿಸಿತು.

ಪತ್ರಿಕೆಯ ಓದುಗರು, ಅಭಿಮಾನಿಗಳು, ಹಿರಿಯರು ಹಾಗೂ ಹಿತೈಷಿಗಳು ಪತ್ರಿಕಾ ಕಚೇರಿಗೆ ಭೇಟಿ ನೀಡಿ ಪತ್ರಿಕೆಯ ಯಶಸ್ಸು ಹಾಗೂ ಮುಂದಿನ ಪಯಣಕ್ಕೆ ದೇವರ ಆಶೀರ್ವಾದ ಕೋರಿ, ಸಂಪಾದಕ ಮಂಡಳಿಗೆ ಶುಭ ಹಾರೈಸಿದರು.

ಡಾ. ವಿಷ್ಣುವರ್ಧನ ಸೇನಾ ಸಮಿತಿ, ಅಧ್ಯಕ್ಷ ಬಿ.ಪಂಪಾಪತಿ, ಸಮಿತಿಯ ಸದಸ್ಯರಾದ ಬಿ.ಚಂದ್ರಶೇಖರ, ಮುರಳಿ, ಎಂ.ಜಿ. ಬಳ್ಳೂರೇಶ, ವೀರೇಶ್ವಾಮಿ ಹಂಪಿ ಟೈಮ್ಸ್ ಮೂರನೇ ವರ್ಷಕ್ಕೆ ಪಾದರ್ಪಣೆಯ ಈ ಸಂದರ್ಭದಲ್ಲಿ ಪತ್ರಿಕೆ ಸಂಪಾದಕ ಬಸಾಪುರ ಬಸವರಾಜ ಅವರ ಭಾವಚಿತ್ರವನ್ನು ಕೇಕ್ ಮೇಲೆ ಹಾಕಿಸಿ ತಂದಿದ್ದು ವಿಶೇಷವಾಗಿತ್ತು. ಎಲ್ಲರ ಹರ್ಷವನ್ನು ಇಮ್ಮಡಿಗೊಳಿಸಿತು. ಹಂಪಿಟೈಮ್ಸ್ ಪತ್ರಿಕಾ ಕಚೇರಿಯಲ್ಲಿ ಓದುಗರ ಹರ್ಷೋದ್ಗಾರದ ವಾತಾವರಣ ನೆಲೆಸಿತ್ತು. ಈ ಸಂದರ್ಭದಲ್ಲಿ ಹಿರಿಯರು ಪತ್ರಿಕೆಯ ಸಾಮಾಜಿಕ ಕಳಕಳಿ, ನಿಖರ ಮಾಹಿತಿ ನೀಡುವ ಬದ್ಧತೆಯನ್ನು ಶ್ಲಾಘಿಸಿ, ಹಂಪಿಟೈಮ್ಸ್ ಮತ್ತಷ್ಟು ಎತ್ತರಕ್ಕೆ ಬೆಳೆಯಲಿ ಎಂದು ಹಾರೈಸಿದರು.



ಪ್ರಭಾರಿ ಕ್ಷೇತ್ರ ಶಿಕ್ಷಣಾಧಿಕಾರಿ ಶೇಖರಪ್ಪ ಹೊರಪೇಟೆ, ಸಾಯಿಮಣಿ ಪ್ರಕಾಶನದ ಪ್ರಕಾಶಕರಾದ ಡಿ.ವೆಂಕಟೇಶ್, ಶಿಕ್ಷಕಿ ಸರಳಾ ಎಂ.ಎಚ್., ಖ್ಯಾತ ಲೇಖಕರಾದ ಎಂ.ಎಂ.ಶಿವಪ್ರಕಶ, ಬಿ.ಎಂ. ರಾಜಶೇಖರ, ಹಿರಿಯರಾದ ಬಿ.ಎಂ.ಪ್ರಭುದೇವ, ಟಿ.ಲೀಲಾ, ಹಿರಿಯ ಪತ್ರಕರ್ತರಾದ ಬಿ.ಎಚ್. ಎಸ್.ರಾಜು, ಎಂ.ಜಿ.ಬಾಲಕೃಷ್ಣ, ಬಿ.ಕುಮಾರ ಸ್ವಾಮಿ, ಸ್ನೇಹಿತರಾದ ಬಿ.ಜಿ.ಓಂಕಾರೇಶ, ಯು. ಎಂ.ಜಗದೀಶ, ಕಿರಣ್, ಅಜಯ್ ಹಿರಮೇಠ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಹಂಪಿಟೈಮ್ಸ್ ಸಂಪಾದಕ ಬಸಾಪುರ ಬಸವರಾಜ ಮಾತನಾಡಿ, "ನಮ್ಮ ಎರಡನೇ ವಾರ್ಷಿಕೋತ್ಸವದ ಈ ಶುಭ ಸಂದರ್ಭದಲ್ಲಿ ಶ್ರೀ ವಿರೂಪಾಕ್ಷೇಶ್ವರನ ಆಶೀರ್ವಾದ ಮತ್ತು ನಮ್ಮ ಪ್ರೀತಿಯ ಓದುಗರು, ಅಭಿಮಾನಿಗಳು, ಗುರು ಹಿರಿಯರ ಬೆಂಬಲಕ್ಕೆ ನಾವು ಚಿರಋಣಿ. ವಾರ್ಷಿಕೋತ್ಸವದ ಈ ಸಂಭ್ರಮವು ಹಂಪಿಟೈಮ್ಸ್ ತಂಡಕ್ಕೆ ಇನ್ನಷ್ಟು ಹುಮ್ಮಸ್ಸು ತುಂಬಿದೆ. ನಿಮ್ಮ ಪ್ರೋತ್ಸಾಹವಿಲ್ಲದೆ ಈ ಯಶಸ್ಸು ಸಾಧ್ಯವಿರಲಿಲ್ಲ. ಮುಂದೆಯೂ ಕೂಡ ಸಮಾಜಮುಖಿ ಪತ್ರಿಕೋದ್ಯಮವನ್ನು ಮುಂದುವರೆಸುವ ಬದ್ಧತೆಯನ್ನು ನಾವು ಪುನರುಚ್ಚರಿಸುತ್ತೇವೆ". ಮುಂದಿನ ದಿನಗಳಲ್ಲಿ ಇನ್ನಷ್ಟು ಗುಣಮಟ್ಟದ ಸುದ್ದಿ ಹಾಗೂ ವಿಶ್ಲೇಷಣೆಗಳನ್ನು ನೀಡುವ ಮೂಲಕ ಓದುಗರ ವಿಶ್ವಾಸವನ್ನು ಉಳಿಸಿಕೊಳ್ಳುವುದಾಗಿ ತಿಳಿಸಿದರು.



## ಹಂಪಿಯಿಂದ ಅಮೇರಿಕಾದವರೆಗೆ ಓದುಗರ ಗಮನ ಸೆಳೆದ ಹಂಪಿ ಟೈಮ್ಸ್

ಹಂಪಿ ಟೈಮ್ ಪತ್ರಿಕೆ ಯಶಸ್ವಿಯಾಗಿ ಎರಡು ವರ್ಷಗಳನ್ನು ಪೂರೈಸಿದೆ. ಅಭಿನಂದನೆಗಳು. ಎರಡು ವರ್ಷಗಳ ಪತ್ರಿಕೆಯ ಕಾರ್ಯ, ಸಾಧನೆ ಅನನ್ಯವಾದುದಾಗಿದೆ. ಕೈಯಲ್ಲಿ ಮೊಬಲ್ ಹಿಡಿದವರೆಲ್ಲ ವರದಿಗಾರಿಕೆಯನ್ನು ಮಾಡುತ್ತಿರುವ ಈ ಹೊತ್ತಿನಲ್ಲಿ, ಪತ್ರಿಕೆಯು ವಿಭಿನ್ನ ಚಿಂತನೆ, ಪ್ರಯೋಗಗಳ ಮೂಲಕ ಹೊಸತನವನ್ನು ತಂದುಕೊಟ್ಟಿದೆ. ಒಂದು ಕಾಲಘಟ್ಟದಲ್ಲಿ ಪತ್ರಿಕೆಯ ಮುಂಜಾನೆಯ ಸುದ್ದಿ ಸಂಜೆಗೆ ರದ್ದಿಯಾಗುತ್ತಿತ್ತು. ಆದರೆ ಇಂದು ಕ್ಷಣಕ್ಷಣದ ಸುದ್ದಿಗಳು ಹಳತಾಗುತ್ತಿರುವ ಡಿಜಿಟಲ್ ಕಾಲದಲ್ಲಿ, ಪತ್ರಿಕೆಯಲ್ಲಿ ಸುದ್ದಿ ಆಯ್ಕೆಮಾಡಿ ಪ್ರಕಟಿಸುವುದು ಸವಾಲಿನ ಕೆಲಸ. ಇಂಥಹ ಸಮಯದಲ್ಲಿ ಸನ್ಮಿತ್ರರು ಸಂಪಾದಕರಾದ ಬಸಾಪುರ ಬಸವರಾಜ ಇವರು ತಮ್ಮ ಪತ್ರಿಕ್ಯೋದ್ಯಮದ ಅಪಾರ ಅನುಭದ ಹಿನ್ನಲೆಯಲ್ಲಿ, ಪತ್ರಿಕೆಯನ್ನು ಶೈಕ್ಷಣಿಕವಾಗಿ, ಸಾಹಿತ್ಯಕವಾಗಿ, ಸಮಾಜಿಕವಾಗಿ, ಸಾಂಸ್ಕೃತಿಕವಾಗಿ ರೂಪಿಸಿ ಆ ನಿಟ್ಟಿನಲ್ಲಿ ಹೊಸ ಹೊಸ ಲೇಖಕರಿಗೆ ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಇದರಿಂದಾಗಿಯೇ ಪತ್ರಿಕೆ ರಾಜ್ಯಮಟ್ಟದಲ್ಲಿ ಗುರುತಿಸಲ್ಪಟ್ಟಿದೆ. ಡಿಜಿಟಲ್ ಮೂಲಕ ದೇಶ ವಿದೇಶಗಳಲ್ಲಿಯು ಇದಕ್ಕೆ ಓದುಗರು, ಅಭಿಮಾನಿಗಳು ಇದ್ದಾರೆ ಎಂದರೆ ಪತ್ರಿಕೆಯ ಸಾಧನೆ ಮೆಚ್ಚುವಂತಹದ್ದು.

ಕಳೆದ ವರ್ಷದ ಎಸ್.ಎಸ್.ಎಲ್.ಸಿ ಫಲಿತಾಂಶ ವಿಜಯನಗರ ಜಿಲ್ಲೆಯಲ್ಲಿ ಕಡಿಮೆ ಬಂದಿತ್ತು ಎನ್ನವ ಕಾರಣಕ್ಕೆ ಮುಖ್ಯಮಂತ್ರಿ ಯವರು ವಿಜಯನಗರ ಡಿಡಿಪಿಐ ಅವರನ್ನು ಅಮಾನತ್ತುಗೋಳಿಸಿದ್ದರು. ಈ ಘಟನೆಯಿಂದ ಸಂಪಾದಕರು ಬೇಸರಗೊಂಡು ಈ ಭಾರಿಯ ಫಲಿತಾಂಶವನ್ನು ಉನ್ನತ್ತಿಕರಿಸಬೇಕೇಂದು ಪಣತೊಟ್ಟು, ವರ್ಷವೀಡಿ ಶಿಕ್ಷಣ ಇಲಾಖೆಯೊಂದಿಗೆ, ಶಾಲೆಯ ಶಿಕ್ಷಕರೊಂದಿಗೆ ವಿದ್ಯಾರ್ಥಿಗಳೊಂದಿಗೆ ಕೈಜೋಡಿಸಿ, ಶಿಕ್ಷಕರ ಮೂಲಕ ಪ್ರಶ್ನೆಪತ್ರಿಗಳನ್ನು ಸಿದ್ದಪಡಿಸಿ, ಅವುಗಳನ್ನು ದಿನಕ್ಕೊಂದು ವಿಷಯದಂತೆ ಪ್ರಕಟಿಸಿ, ಪತ್ರಿಕೆಗಳನ್ನು ಉಚಿತವಾಗಿ ವಿದ್ಯಾರ್ಥಿಗಳಿಗೆ ವಿತರಿಸಿ ಉತ್ತಮ ಅಂಕಗಳನ್ನು ಪಡೆಯುವಂತೆ ಮಾಡಿದ್ದು, ಹಾಗೂ 625 ಅಂಕಗಳಿಗೆ ಜಿಲ್ಲೆಯಲ್ಲಿ 625 ಅಂಕಗಳನ್ನು ಪಡೆಬೇಕೆಂಬ ಗುರಿಯನ್ನು ಸಾಧಿಸಿದ್ದು ಪತ್ರಿಕೆಯ ದೊಡ್ಡ ಸಾಧನೆ. ಇದಕ್ಕಾಗಿ ಪತ್ರಿಕೆಗೆ ಆರ್ಥಿಕವಾಗಿ ಯಾವುದೇ ಲಾಭವಾಗಲಿಲ್ಲ. ಆದರೆ ಶೈಕ್ಷಣಿಕವಾಗಿ ವಿಜಯನಗರ ಜಿಲ್ಲೆಗೆ, ವಿದ್ಯಾರ್ಥಿಗಳಿಗೆ ಲಾಭವಾಯಿತು. ಜಿಲ್ಲೆಯ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸಿದ ಹೆಗ್ಗಳಿಕೆ ಹಂಪಿ ಟೈಮ್ಸ್ ಗೆ ಸಲ್ಲುತ್ತದೆ. ಒಂದು ಜಿಲ್ಲಾ ಪತ್ರಿಕೆ ಅದರಲ್ಲೂ ಪ್ರಾರಂಭಗೊಂಡ ವರ್ಷಗಳಲ್ಲಿಯೇ ಇಂಥಹಾ ಸಾಹಸಕ್ಕೆ ಕೈಹಾಕಿದ್ದು ಸಂಪಾದಕರ ಹುಚ್ಚು ಎನ್ನಬಹುದು.

ಬೀದರ್ ನಿಂದ ಕಾರವಾರದ ವರೆಗೆ, ಬೆಂಗಳೂರಿನಿಂದ ಮಂಗಳೂರಿನವರೆಗೆ, ಹಂಪಿಯಿಂದ ಅಮೇರಿಕದವರೆಗೆ ಓದುಗರನ್ನು, ಲೇಖಕರನ್ನು ಹೊಂದಿರುವ ಸ್ಥಳಿಯ ಪತ್ರಿಕೆ ಎನ್ನುವ ಹೆಗ್ಗಳಿಕೆ ಹಂಪಿಟೈಮ್ಸ್ ಪತ್ರಿಕೆಯದ್ದು. ಹಲವಾರು ಕವಿಗಳು, ಲೇಖಕರ ಕವಿತೆ, ಲೇಖನಗಳನ್ನು, ತಿದ್ದೀ, ತೀಡಿ ಅವರ ಬರಹಳು ಸುಂದರವಾಗಿ ಪ್ರಕಟಗೊಂಡಾಗ ಅವರೆ ಆಶ್ಚರ್ಯ ಪಡುವಂತೆ ಮಾಡಿದ್ದು ಸಂಪಾದಕರ ತಾಳ್ಮೇ, ಕೈಚಳಕ. ದಿನವೂ ಮನೆಯಲ್ಲಿ ತಾಯೆಂದಿರು ಮಕ್ಕಳಿಗೆ ಹೊಸ ಹೊಸ ಊಟಗಳನ್ನು ಉಣಬಡಿಸುವಂತೆ, ಸಂಪಾದಕರು ಓದುಗರಿಗೆ ಹೊಸ ಬರಹಗಳನ್ನು ಪ್ರಕಟಿಸುವ ಮೂಲಕ ಹೊಸತನಕ್ಕೆ ಪತ್ರಿಕೆಯನ್ನು ಮುಕ್ತಗೊಳಿಸಿದ್ದಾರೆ. ಎರಡು ವರ್ಷಗಳ ಕಾಲ ನಿರಂತರವಾಗಿ ಪತ್ರಿಕೆ ಪ್ರಕಟಗೊಂಡು ಸಾಧನೆ ಮಾಡಿದೆ. ವ್ಯಕ್ತಿಯಾಗಿ, ಸಂಪಾದಕರಾಗಿ ಪತ್ರಿಕೆಯನ್ನು ಸಧಬಿ, ರುಚಿ ಓದುಗರಿಗಾಗಿ ಸಮೃದ್ಧವಾಗಿ ಉಣಬಡಿಸುತ್ತಿರುವ ಸಂಪಾದಕ, ಸನ್ಮಿತ್ರರಾದ ಬಸಾಪುರ ಬಸವರಾಜ ಇವರಿಗೆ ಅಭಿನಂದನೆಗಳು.



**ಡಾ.ಎಸ್.ಎಂ.ಶಶಿಧರ ತಂತ್ರಜ್ಞಾನ ಪರಿಣತರು, ಬಳ್ಳಾರಿ**

## ಹಂಪಿ ಶಕ್ತಿ ಪರಂಪರೆಯ ಪ್ರತಿಬಿಂಬ

ಒಂದು ದಿನಪತ್ರಿಕೆಯು ಕೇವಲ ಸುದ್ದಿಗಳನ್ನು ತಲುಪಿಸುವ ಸಾಧನವಾಗಿರದೆ, ಸಮಾಜದ ಹೃದಯವನ್ನು ಸ್ಪರ್ಶಿಸಬೇಕು, ಜ್ಞಾನವನ್ನು ಹರಡಬೇಕು ಮತ್ತು ಪ್ರತಿಯೊಬ್ಬರಿಗೂ ಸ್ಫೂರ್ತಿಯ ಬೆಳಕನ್ನು ಬಿತ್ತಬೇಕು, ಹಂಪಿ ಟೈಮ್ಸ್ ದಿನಪತ್ರಿಕೆ ಇದಕ್ಕೆ ಒಂದು ಅಪರೂಪದ ಉದಾಹರಣೆ. ಕೇವಲ ಎರಡು ವರ್ಷಗಳಲ್ಲಿ, ಹೊಸಪೇಟೆಯಿಂದ ಆರಂಭಗೊಂಡ ಈ ಪತ್ರಿಕೆಯು ಕರ್ನಾಟಕ, ಭಾರತ, ಮತ್ತು ವಿಶ್ವಾದ್ಯಂತ ಕನ್ನಡ ಓದುಗರ ಹೃದಯವನ್ನು ಗೆದ್ದಿದೆ. ಗ್ರಾಮೀಣ ರೈತರಿಂದ ಹಿಡಿದು ಅಂತರರಾಷ್ಟ್ರೀಯ ಕನ್ನಡಿಗರವರೆಗೆ, ಎಲ್ಲ ವಯಸ್ಸಿನ ಮತ್ತು ವರ್ಗದ ಓದುಗರ ಮನಸ್ಸಿನಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿದೆ. ಇದರ ಆಕರ್ಷಕ ಪುಟ ವಿನ್ಯಾಸವು ಓದುಗರಿಗೆ ಮುದ ನೀಡುತ್ತದೆ, ಪ್ರತಿ ಪುಟವೂ ಓದುವ ಉತ್ಸಾಹವನ್ನು ಹೆಚ್ಚಿಸುತ್ತದೆ.

ಹಂಪಿ ಟೈಮ್ಸ್ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿಯಾದ ಹಂಪಿಯ ಶಕ್ತಿಯನ್ನು ಮತ್ತು ಪರಂಪರೆಯನ್ನು ತನ್ನ ಪುಟಗಳಲ್ಲಿ ಪ್ರತಿಬಿಂಬಿಸುತ್ತದೆ. ಸ್ಥಳೀಯ ಸಮಸ್ಯೆಗಳಿಗೆ ಧ್ವನಿಯಾಗಿ, ರೈತರ, ಕಾರ್ಮಿಕರ, ಮತ್ತು ವಿದ್ಯಾರ್ಥಿಗಳ ಜೀವನದ ಸವಾಲುಗಳನ್ನು ಎತ್ತಿಹಿಡಿಯುತ್ತದೆ. ಶಿಕ್ಷಣ ಕ್ಷೇತ್ರಕ್ಕೆ ಬೆಂಬಲವಾಗಿ, ವಿದ್ಯಾರ್ಥಿಗಳಿಗೆ ಜ್ಞಾನದ ಜೊತೆಗೆ ಮೌಲ್ಯಯುತ ಚಿಂತನೆಯನ್ನು ಒದಗಿಸುತ್ತದೆ. ಯುವಕರಿಗೆ ಸ್ಫೂರ್ತಿಯ ಮೂಲವಾಗಿ, ತಮ್ಮ ಕನಸುಗಳನ್ನು ಸಾಕಾರಗೊಳಿಸಲು ಪ್ರೇರಣೆ ನೀಡುತ್ತದೆ. ಸುದ್ದಿಗಳಿಗೆ ಸೀಮಿತವಾಗದೆ, ಸಾಮಾಜಿಕ, ಕೌಟುಂಬಿಕ, ವಿಜ್ಞಾನ, ಮತ್ತು ತಂತ್ರಜ್ಞಾನದ ವಿಷಯಗಳ ಲೇಖನಗಳನ್ನು ಪ್ರಕಟಿಸುವ ಮೂಲಕ, ಓದುಗರಿಗೆ ಒಂದು ಸಾಂಸ್ಕೃತಿಕ ಸೇತುವೆಯಾಗಿದೆ.

ವಿಶೇಷವಾಗಿ, ಹಂಪಿ ಟೈಮ್ಸ್ ಸಾಮಾಜಿಕ ಜವಾಬ್ದಾರಿಯನ್ನು ತನ್ನ ಕರ್ತವ್ಯವಾಗಿ ಸ್ವೀಕರಿಸಿದೆ. ಸ್ಥಳೀಯ ಕಲಾವಿದರಿಗೆ, ಲೇಖಕರಿಗೆ, ಮತ್ತು ಯುವಜನತೆಗೆ ವೇದಿಕೆಯನ್ನು ಒದಗಿಸುವ ಮೂಲಕ, ಸಮಾಜದ ಸೃಜನಶೀಲತೆಯನ್ನು ಉತ್ತೇಜಿಸುತ್ತದೆ. ಪ್ರೌಢಶಾಲಾ ವಿದ್ಯಾರ್ಥಿಗಳಿಂದ ವಿಶ್ವವಿದ್ಯಾಲಯದ ವಿದ್ವಾಂಸರವರೆಗೆ, ಎಲ್ಲರಿಗೂ ತಮ್ಮ ಚಿಂತನೆಗಳನ್ನು ಹಂಚಿಕೊಳ್ಳಲು ಸಮಾನ ಅವಕಾಶವನ್ನು ಕಲ್ಪಿಸಿದೆ. ಈ ಮೂಲಕ, ಹೊಸ ಲೇಖಕರ ತಂಡವನ್ನು ಸೃಷ್ಟಿಸಿ, ಕನ್ನಡ ಪತ್ರಿಕಾ ಲೋಕಕ್ಕೆ ಒಂದು ಹೊಸ ಆಯಾಮವನ್ನು ತಂದಿದೆ. ಹಂಪಿ ಟೈಮ್ಸ್ ಇನ್ನಷ್ಟು ಮತ್ತಷ್ಟು ಎತ್ತರಕ್ಕೇರಲಿ. ಕನ್ನಡಿಗರ ಹೃದಯದಲ್ಲಿ ಚಿರಸ್ಥಾಯಿಯಾಗಿ ನೆಲೆಯೂರಲಿ. ಎರಡನೇ ವಾರ್ಷಿಕೋತ್ಸವದ ಶುಭಾಶಯಗಳು.

# ಸದೃಢ ಮಾನಸಿಕತೆಗೆ ನಿತ್ಯ ಯೋಗ ಸಹಕಾರಿ

## 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಉದ್ಘಾಟಿಸಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್

**ಹಂಪಿ ಟೈಮ್ಸ್ ಹೊಸಪೇಟೆ**

ಆರೋಗ್ಯಕರ ಜೀವನ ಸಾಗಿಸಲು ಮತ್ತು ದೈಹಿಕವಾಗಿ ಸದೃಢವಾಗಲು ಯೋಗವು ಮುಖ್ಯ ಪಾತ್ರ ವಹಿಸಲಿದೆ. ಪ್ರತಿಯೊಬ್ಬರೂ ನಿತ್ಯ ಯೋಗಾಭ್ಯಾಸ ರೂಢಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಸಲಹೆ ನೀಡಿದರು.

ನಗರದ ಸ್ವಾತಂತ್ರ್ಯ ಉದ್ಯಾನವನ(ಫ್ರೀಡಂ ಪಾರ್ಕ್)ದಲ್ಲಿ ಜಿಲ್ಲಾಡಳಿತ, ಜಿಪಂ ಹಾಗೂ ಜಿಲ್ಲಾ ಆಯುಷ್ ಇಲಾಖೆ, ಸ್ಕೌಟ್ಸ್ & ಗೈಡ್ಸ್ ಘಟಕ, ಪ್ರಜಾಪಿತ ಬ್ರಹ್ಮಕುಮಾರಿ ವಿಶ್ವವಿದ್ಯಾಲಯ, ಪತಂಜಲಿ ಯೋಗ ಸಂಸ್ಥೆ, ಎ.ಎಫ್.ಐ. ಮತ್ತು ವಿವಿಧ ಯೋಗ ಸಂಘ-ಸಂಸ್ಥೆಗಳ ಸಹಭಾಗಿತ್ವದಲ್ಲಿ ಏರ್ಪಡಿಸಿದ್ದ 'ಒಂದು ಭೂಮಿ, ಒಂದು ಆರೋಗ್ಯಕ್ಕಾಗಿ ಯೋಗ' ಎಂಬ ಘೋಷವಾಕ್ಯದೊಂದಿಗೆ 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಕಾರ್ಯಕ್ರಮ ಉದ್ಘಾಟಿಸಿ ಶನಿವಾರ ಅವರು ಮಾತನಾಡಿದರು. ಈಗಿನ ಯುವ ಜನರಿಗೆ ಯೋಗದ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸುವ ಅಗತ್ಯವಿದೆ. ವೇದಕಾಲದಿಂದಲೂ ಯೋಗದ ಬಗ್ಗೆ ಭಾರತದಲ್ಲಿ ಕಲ್ಪನೆಯಿದೆ. ಬದಲಾದ ಜೀವನ ಶೈಲಿಯಿಂದಾಗಿ ಅಸಮತೋಲನ ಅಹಾರ ಪದ್ಧತಿಗಳಿಂದ ಅನಾರೋಗ್ಯಪೀಡಿತರಾಗುತ್ತಿರುವುದು ಹೆಚ್ಚಾಗಿದೆ. ರೋಗಮುಕ್ತವಾಗಲು ಯೋಗವನ್ನು ರೂಢಿಸಿಕೊಳ್ಳಬೇಕಿದೆ. ಕೇವಲ ವಯಸ್ಸಾದ, ದಪ್ಪ ಮತ್ತು ಆರೋಗ್ಯ ಸಮಸ್ಯೆ ಇದ್ದವರು ಮಾತ್ರ ಯೋಗ ಮಾಡಬೇಕು ಎಂಬ ತಪ್ಪು ಕಲ್ಪನೆಯಿಂದ ಹೊರಬರಬೇಕಿದೆ. ದೈಹಿಕ, ಮಾನಸಿಕ ಆರೋಗ್ಯ ವೃದ್ಧಿಗೆ ಇದು ಸಹಕಾರಿಯಾಗಲಿದೆ. ಮಾನಸಿಕ ಒತ್ತಡ, ಖಿನ್ನತೆಯನ್ನು ಕಡಿಮೆ ಮಾಡಲು ಯೋಗವು ಪರಿಣಾಮಕಾರಿ ವಿಧಾನವಾಗಿದೆ. ವಿದ್ಯಾರ್ಥಿಗಳಲ್ಲಿ ಏಕಾಗ್ರತೆ ಮತ್ತು ಸ್ಮರಣಾಶಕ್ತಿಯನ್ನು ಹೆಚ್ಚಿಸುತ್ತದೆ ಎಂದರು.




ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ ಮಾತನಾಡಿ, ಯೋಗವನ್ನು ನಿಯಮಿತವಾಗಿ ಮಾಡುವುದರಿಂದ ರಕ್ತಪರಿಚಲನೆ, ಜೀರ್ಣಕ್ರಿಯೆ, ಉತ್ತಮ ನಿದ್ರೆಗೆ ಅನುಕೂಲವಾಗಲಿದೆ. ಭಾರತದಲ್ಲಿ ಆಯುರ್ವೇದದಲ್ಲಿ ಹೇಳಿರುವಂತೆ ಯೋಗವು ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಮೂರರ ನಡುವಿನ ಸಮತೋಲನವನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ. ಇದರಿಂದ ನಮ್ಮ ದೇಹದ ಮೇಲೆ ನಿಯಂತ್ರಣ ಸಾಧಿಸಬಹುದಾಗಿದೆ ಎಂದರು.

ಹೊಸಪೇಟೆ ನಗರಸಭೆಯ ಅಧ್ಯಕ್ಷರಾದ ರೂಪೇಶ್ ಕುಮಾರ್ ಮಾತನಾಡಿ, ಸಾರ್ವಜನಿಕರಿಗೆ ಅನುಕೂಲವಾಗುವಂತೆ ನಗರದ ಉದ್ಯಾನವನ ಹಾಗೂ ಇನ್ನಿತರೆ ಸಾರ್ವಜನಿಕ ಸ್ಥಳಗಳಲ್ಲಿ ಯೋಗಾಭ್ಯಾಸದ ಅನುಕೂಲತೆ ಮಾಡಿಕೊಡುವಂತೆ ಜಿಲ್ಲಾಡಳಿತಕ್ಕೆ ಮನವಿ ಮಾಡಿದರು.

ಯೋಗ ಗುರುಗಳಾದ ಕಿರಣ್ ಜೀ ಮತ್ತು ರಾಜೇಶ್ ಕರ್ವಾ ವಿವಿಧ ಆಸನಗಳನ್ನು ಮಾಡಿಸಿದರು.

ಈ ವೇಳೆ ಪ್ರಭಾರಿ ಬಿಇಒ ಶೇಖರಪ್ಪ ಹೊರಪೇಟೆ, ಆಯುಷ್ ಇಲಾಖೆಯ ವೈದ್ಯಾಧಿಕಾರಿ ಡಾ.ಮುನಿವಾಸುದೇವರೆಡ್ಡಿ, ಡಾ.ಕೆ. ಹೆಚ್.ಗುರುಬಸವರಾಜ, ಡಾ.ಹೆಚ್.ಕೊಟ್ರಮ್ಮ, ಡಾ.ಸರಸ್ವತಿ, ಡಾ.ಹೇಮ, ಡಾ.ಹಾಲಮ್ಮ, ಆಕಾಶವಾಣಿಯ ನಾಗರತ್ನ, ಪತಂಜಲಿ ಯೋಗ ಸಂಸ್ಥೆಯ ಜಿಲ್ಲಾ ಉಸ್ತುವಾರಿ ಎಫ್.ಡಿ.ಹಳ್ಳಿಕೇರಿ, ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ಅಧ್ಯಕ್ಷರಾದ ಮಾನಸ, ಸ್ಕೌಟ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಸೇರಿದಂತೆ ಕಾರ್ಯಕ್ರಮದಲ್ಲಿ 1000ಕ್ಕೂ ಹೆಚ್ಚು ವಿವಿಧ ಶಾಲಾ ಕಾಲೇಜಿನ ಮಕ್ಕಳು, ವಿವಿಧ ಯೋಗ ಸಂಸ್ಥೆಗಳ ಯೋಗ ಪಟುಗಳು, ಆಯುಷ್ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

# ಕನ್ನಡದ ಅಸ್ಮಿತೆ ಪ್ರತಿಬಿಂಬಿಸಲು ಅವಕಾಶ: ಡಾ.ಮಹೇಶ್ ಜೋಶಿ




■ **ಹಂಪಿ ಟೈಮ್ಸ್ ಬಳ್ಳಾರಿ**

ಕನ್ನಡ ಭಾಷೆಯು ಸ್ವತಂತ್ರ ಭಾಷೆಯಾಗಿದ್ದು, ತನ್ನದೇ ಆದ ಇತಿಹಾಸ ಹೊಂದಿದೆ. ಕನ್ನಡದ ಅಸ್ಮಿತೆ ಪ್ರತಿಬಿಂಬಿಸಲು ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಕನ್ನಡಾಭಿಮಾನಿಗಳಿಗೆ ಅವಕಾಶ ದೊರೆತಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಅವರು ಹೇಳಿದರು.

ಬಳ್ಳಾರಿಯಲ್ಲಿ ಜರುಗಲಿರುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವ ಸಿದ್ಧತೆಗಾಗಿ ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದ ಪತ್ರಿಕಾ ಭವನದಲ್ಲಿ ಶನಿವಾರ ಏರ್ಪಡಿಸಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ನುಡಿಹಬ್ಬ, ಕನ್ನಡದ ಜಾತ್ರೆ ಇದ್ದಂತೆ. 68 ವರ್ಷಗಳ ಬಳಿಕ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆ ಒಳಗೊಂಡಂತೆ ಅಖಂಡ ಜಿಲ್ಲೆಯಲ್ಲಿ ಡಿಸೆಂಬರ್ ನಲ್ಲಿ ಜರುಗುತ್ತಿದ್ದು, ಎರಡು ಜಿಲ್ಲೆಗಳ ಕನ್ನಡ ಸಾಹಿತ್ಯಕಾರರು, ವಿವಿಧ ಕನ್ನಡಪರ ಸಂಘಟನೆಗಳು ಮತ್ತು ಮಾಧ್ಯಮದವರ ಪರಸ್ಪರ ಸಹಕಾರ ಮತ್ತು ಸಹಭಾಗಿತ್ವ ಅಗತ್ಯವಿದೆ ಎಂದರು.

ಬಳ್ಳಾರಿಯಲ್ಲಿ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಡಿಸೆಂಬರ್ ತಿಂಗಳಲ್ಲಿ ಆಯೋಜಿಸಲು ಸೂಕ್ತ ಎಂದು ಸರ್ಕಾರದ ಗಮನಕ್ಕೆ ತರಲಾಗಿದೆ. ಈ ಕುರಿತು ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆ ಒಳಗೊಂಡಂತೆ ಜಿಲ್ಲಾಧಿಕಾರಿಗಳು, ಹಿರಿಯ ಸಾಹಿತ್ಯ ಮುಖಂಡರು, ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಲಾಗುವುದು ಎಂದರು.

ದೀರ್ಘಾವಧಿಯ ನಂತರ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಬಳ್ಳಾರಿಯಲ್ಲಿ ನಡೆಯುತ್ತಿದ್ದು, ಇದಕ್ಕೆ ಬೇಕಾದ ಸ್ಥಳ ನಿಗದಿ, ದಿನಾಂಕ ಗೊತ್ತುಪಡಿಸುವಿಕೆ ಮತ್ತಿತರ ಅಗತ್ಯ ಕ್ರಮಗಳ ಕುರಿತಂತೆ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಜಿಲ್ಲಾಡಳಿತದೊಂದಿಗೆ ಚರ್ಚಿಸಲಾಗುವುದು. ಬಳಿಕ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುವುದು ಎಂದರು.

ಸಾಹಿತ್ಯ ಸಮ್ಮೇಳನವನ್ನು ಅತ್ಯಂತ ವಿಜೃಂಭಣೆಯಿಂದ ಆಯೋಜಿಸಲು ಜಿಲ್ಲಾಡಳಿತದೊಂದಿಗೆ ವಿವಿಧ ಕನ್ನಡಪರ ಸಂಘಟನೆಗಳು ಸಹಾಯ, ಸಹಯೋಗ ಮತ್ತು ಸಮಾಲೋಚನೆಯಿಂದ ಉತ್ಸುಕರಾಗಿದ್ದು, ಸಮ್ಮೇಳನಕ್ಕೆ ಸಾರ್ವಜನಿಕರು, ಗಡಿಭಾಗದ ಜನರು, ಕನ್ನಡಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಅವರು ತಿಳಿಸಿದರು.

ಹಲವು ವರ್ಷಗಳ ಬಳಿಕ ಈ ಭಾಗದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದ್ದು, ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳುವ ನಿರೀಕ್ಷೆ ಇಟ್ಟುಕೊಳ್ಳಲಾಗಿದೆ. ಹಾಗಾಗಿ ಈ ಕುರಿತು ಸರ್ಕಾರಕ್ಕೆ ಅನುದಾನದ ಬೇಡಿಕೆ ಪ್ರಸ್ತಾಪಿಸಿದ್ದೇವೆ. ಜಿಲ್ಲಾಡಳಿತವು ಸಹ ಮುಂದಿನ ದಿನಗಳಲ್ಲಿ ಸರ್ಕಾರಕ್ಕೆ ವರದಿ ನೀಡಲಿದೆ ಎಂದು ಸ್ಪಷ್ಟಪಡಿಸಿದರು.

88 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಈ ಭಾಗದಲ್ಲಿ ನಡೆಯುತ್ತಿರುವುದು ಈ ಭಾಗದ ಜನರ ಬಹುದಿನಗಳ ಬೇಡಿಕೆ ಮತ್ತು ಸದಾವಕಾಶ ಸಿಕ್ಕಿದೆ. ಹಾಗಾಗಿ ಇಲ್ಲಿ ನಡೆಯುವುದರಿಂದ ಕನ್ನಡದ ಅಸ್ಮಿತೆಯು ಗಡಿಭಾಗದ ಎಲ್ಲೆ ಮೀರಿ ಹರಡಲಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಬಳ್ಳಾರಿ ಜಿಲ್ಲಾ ಕಸಾಪ ಅಧ್ಯಕ್ಷ ಡಾ.ನಿಷ್ಠಿ ರುದ್ರಪ್ಪ, ಚಿತ್ರದುರ್ಗ ಜಿಲ್ಲಾ ಕಸಾಪ ಅಧ್ಯಕ್ಷ ಕೆ.ಎಂ.ಶಿವಸ್ವಾಮಿ, ಹಾಸನ ಜಿಲ್ಲಾ ಕಸಾಪ ಅಧ್ಯಕ್ಷ ಮಲ್ಲೇಶ್ ಗೌಡ, ಹಾವೇರಿ ಜಿಲ್ಲಾ ಕಸಾಪ ಅಧ್ಯಕ್ಷ ಲಿಂಗಯ್ಯ ಬಿ.ಹಿರೇಮಠ, ದಾವಣಗೆರೆ ಜಿಲ್ಲಾ ಕಸಾಪ ಅಧ್ಯಕ್ಷ ವಾಮದೇವಪ್ಪ ಹಾಗೂ ಇತರರು ಅವರು ಸುದ್ದಿಗೋಷ್ಠಿಯಲ್ಲಿದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

## ಕಳವಳ ಮತ್ತು ಕಳಕಳಿಯ ನಡುವಿನ ನವಿರು ಬಂದವೇ ಈ ಪ್ರೀತಿ!

# ಪ್ರೀತಿಯ ಅಸ್ತಿತ್ವವನ್ನು ಸಂಭ್ರಮಿಸೋಣ ಬನ್ನಿ

ಕಳವಳ ಮತ್ತು ಕಳಕಳಿಯ ನಡುವಿನ ನವಿರು ಬಂದವೇ ಈ . ಪ್ರೀತಿ! ಈ ಮೊದಲು "ಪ್ರೀತಿ ಎನ್ನುವ ಗುಪ್ತಗಾಮನಿ" ಅಂಕಣದಲ್ಲಿ ಪ್ರೀತಿಯ ವ್ಯಾಪ್ತತೆಯ ಬಗ್ಗೆ ಅದು ವ್ಯಾಪಸಿರುವ ಆಗಾದತೆಯ ಹರವಿನ ಕುರಿತು ಬರೆದಿದ್ದೆ. ಅಷ್ಟೊಂದು ವ್ಯಾಪ್ತ, ಅಗಾದ, ಅನಂತ ಮತ್ತು ಅಖಂಡವಾದ ಪ್ರೀತಿಯ ಕುರಿತು ಮಾತನಾಡಲು ನಾವೆಲ್ಲ ಅಶಕ್ತರೇ, ಅಲ್ಪತೃಪ್ತ ಮಾನವಿಕ ವ್ಯವಹಾರದಲ್ಲಿ ತೊಡಗಿರುವ ನಮಗೆ ಪ್ರೀತಿಯ ವ್ಯಾಪ್ತತೆಯ ಮತ್ತು ವ್ಯಾಪಕತೆಯ ಬಗ್ಗೆ ನಮ್ಮ ಅರಿವಿಗೆ ಬಾರದಿದ್ದರೂ, ಪ್ರೀತಿಯ ವಿವಿಧ ರೂಪಗಳನ್ನು ಕಾಣಬಹುದಾಗಿದೆ. ಪ್ರೀತಿಯ ನವಿರು ಬಾವದ ಅನುಭವಕ್ಕೆ ನಮ್ಮನ್ನು ನಾವು ತೆರೆದುಕೊಳ್ಳಬಹುದಾಗಿದೆ.

ಕ್ರಿಮಿಕೀಟಗಳಾದಿಯಾಗಿ, ಪಶುಪಕ್ಷಿಗಳಿಂದ ಮೊದಲುಗೊಂಡು ಮಾನವ ಕುಲಕೋಟಿ ಜೀವಜಂತುಗಳಲ್ಲೂ ಪ್ರೀತಿಯು ಪ್ರವಹಿಸುತ್ತಿದೆ. ಕೇವಲ ಒಲವು ಮತ್ತು ತಾತ್ಕಾಲಿಕ ಅಕರ್ಷಣೆಗೆ ಸೀಮಿತಗೊಳ್ಳದ ಈ ಪ್ರೀತಿ ತನ್ನ ವಿವಿಧ ರೂಪಗಳನ್ನು ನಮ್ಮಗಳ ಮಧ್ಯೆ ತೆರೆದುಕೊಳ್ಳುತ್ತಾ ಹೋಗುತ್ತದೆ. ಒಲವೇ ಜೀವನವಾಗಿ, ಪ್ರೀತಿಯ ಪರಾಕಾಷ್ಠೆಯ ಫಲವಾಗಿ, ಅದು ಕಾಳಾಜಿಯಾಗಿ, ಜೀವನದ ಪ್ರತೀ ಹಂತದಲ್ಲೂ ಕಳಕಳಿಯಾಗಿ, ನಮ್ಮಗಳ ಕಳವಳವಾಗಿ, ಆಸರೆಯಾಗಿ, ನಮಗೆಲ್ಲ ಆಪ್ತವಾಗಿ, ಮದುರವಾಗಿ, ನಮಗೆಲ್ಲಾ ಬೇಕಾಗಿ, ನಮ್ಮೆಲ್ಲರ ಕಳೆದುಕೊಳ್ಳಲಾಗದ ಬಯಕೆಯಾಗಿ ನಮ್ಮನ್ನೆಲ್ಲ ಮುನ್ನೆಡೆಸುತ್ತಿರುವ ಗುಪ್ತಗಾಮನಿಯೇ ಆಗಿದೆ ಈ ಪ್ರೀತಿ.

ನಮ್ಮಗಳ ಮನಸ್ಸಿನ ಆಳದಲ್ಲಿ ಹುಟ್ಟುವ ಪ್ರೀತಿಯ ಸೆಲೆಯೂ, ನಮಗರಿವಿಲ್ಲದಂತೆ ನಮ್ಮಿಂದಾಚೆಗೆ ಹರಿಯುತ್ತದೆ. ಅದಕ್ಕೆ ಭಾಷೆಯ ಆಸರೆಯ ಅಗತ್ಯವಿಲ್ಲ, ಸಂಬಂಧಗಳ ಬಂಧನವಿಲ್ಲ, ಜಾತಿ ವಿಜಾತಿಗಳ ಮಿತಿ ಇಲ್ಲ, ನೆಲದ ಗಡಿಗಳ ಎಲ್ಲೆಯಿಲ್ಲ, ದೇಶ ವಿದೇಶಗಳ ಹಂಗಿಲ್ಲ. ಎಲ್ಲೋ ದೂರದ ದೇಶದಲ್ಲಿ ಉಂಟಾದ ಅಪಘಾತಕ್ಕೆ ನಮ್ಮಗಳ ಮನಸ್ಸು ಆದ್ರವಾಗುತ್ತದೆ. ಯಾವುದೂ ದೇಶದ ಪ್ರಕೃತಿ ವಿಕೋಪಕ್ಕೆ ನಮ್ಮ ಮನಸ್ಸು ಮಮ್ಮಲು ಮರುಗತ್ತದೆ. ಯಾರೋ ಸಾಧಿಸಿದ ಗೆಲವು, ಯಾರಿಗೋ ಸಿಕ್ಕ ಬಹುಮಾನ ಇದ್ದಕ್ಕಿದ್ದಂತೆ ನಮ್ಮನ್ನು ಪುಳಕಗೊಳಿಸುತ್ತದೆ ಅಲ್ಲವೆ ಇದೆಲ್ಲವೂ ಪ್ರೀತಿಯ ಧ್ಯುತಕವಲ್ಲವೆ..?

ನಮ್ಮೆಲ್ಲ ಚಿಕ್ಕ ಪುಟ್ಟ ನೋವುಗಳಲ್ಲಿ ಭಾಗಿ ಯಾಗುವ, ನಮ್ಮ ಸಣ್ಣ ಸಣ್ಣ ಖುಷಿಗಳನ್ನು ತಮ್ಮದೆನ್ನುವಂತೆ ಸಂಭ್ರಮಿಸುವ, ನಮಗರಿವಿಲ್ಲ ದಂತೆ ನಮ್ಮ ಕಷ್ಟಗಳಲ್ಲಿ ಕೈಜೋಡಿಸುವ, ನಮ್ಮ ವಿಚಾರಗಳಿಗೆ ಧ್ವನಿಯಾಗುವ ಹೀಗೆ ನಮ್ಮೆಲ್ಲ ಸಣ್ಣ ಪುಟ್ಟ ವಿಷಯ ಗಳಲ್ಲಿ ನಮ್ಮನ್ನ ಕಾಪಿಟ್ಟು ಕೊಂಡು, ನಮ್ಮನ್ನು ಪ್ರೀತಿಸಿ, ನಮ್ಮನ್ನು ಬೆಳೆಸು ವಂತ ಪ್ರತೀ ವ್ಯಕ್ತಿಯ ಅಂತರಾತ್ಮ ದಲ್ಲಿ ಅಡಗಿ ರುವುದು ಪ್ರೀತಿಯೇ ಅಲ್ಲವೇ..?.






ಜೊತೆಗಿದ್ದವರನ್ನು,ಜೊತೆಯಾಗಿ ನಿಲ್ಲಬಲ್ಲರೂ ಎನ್ನುವಂತವರನ್ನು ಯಾವತ್ತೂ ಕಾಯ್ದುಕೊಳ್ಳುವುದೇ ಪ್ರೀತಿ ಎನಿಸುತ್ತದೆ. ಹಾಗೆ ಒಮ್ಮೆ ಯೋಚಿಸಿ, ಯಾವುದೋ ಆಸ್ಪತ್ರೆಯಲ್ಲಿ ಪಕ್ಕದ ಬೆಡ್ಡಿನಲ್ಲಿರುವ ಯಾರೋ ಅಪರಿಚಿತರು ಅತ್ಯಂತ ಆತ್ಮೀಯರಾಗುತ್ತಾರೆ. ಅವರ ನೋವು ನಲಿವುಗಳಿಗೆ ನಾವು ಸ್ಪಂದಿಸುತ್ತೇವೆ. ಒಂದು ವೇಳೆ ಅವರು ಹೋಗಿಬಿಟ್ಟರು ಅಂದುಕೊಳ್ಳಿ, ಆಗ ನಮಗಾಗುವ ಆ ಸಂಕಟವಿದೆಯಲ್ಲ ಅದನೇನ್ನಬೇಕು ಹೇಳಿ ..? ಯಾರೋ ಬಿಕ್ಷುಕ ದಾರಿಯಲ್ಲಿ ಹಟಾತ್ತಾಗಿ ಎದುರಾಗುತ್ತಾನೆ, ತತಕ್ಷಣ ನಮ್ಮ ಕೈಲಾದ ಸಹಾಯವನ್ನು ಮಾಡುತ್ತೇವೆ. ಇಲ್ಲಿ ನಾವು ಸಹಾಯ ಮಾಡಿದೆವೂ ಎನ್ನುವುದಕ್ಕಿಂತ ಅವನ ಕಷ್ಟಕ್ಕೆ ಮಿಡಿದೆವು ಎನ್ನುವುದೇ ಪ್ರೀತಿಯ ಆ ಒಂದು ಸ್ವರೋಪವೇ ಆಗಿದೆ.

ಪ್ರೀತಿಗೆ ಮಿತಿಗಳಿಲ್ಲ ಅದೊಂದು ಅಮಿತ ಅನುಭವದ ಸಾಗರ. ಅದು ನಾವು ಮಾಡುವ ಕಾರ್ಯವಾಗಿರಬಹುದು, ಅಂದುಕೊಂಡ ಗುರಿಯಾಗಿರಬಹುದು, ಹಚ್ಚಿಕೊಂಡಂತಹ ಸಂಬಂದಗಳಾಗಿರಬಹುದು, ಕೆಲವು ಸಲ ಕೊಟ್ಟಂತಹ ಮಾತುಗಳಾಗಿರಬಹುದು, ಅನೇಕ ಸಲ ನಮ್ಮ ಕಣ್ಣಂಚಿನಲಿ ಮೂಡುವ ಕನಸುಗಳಾಗಿರಬಹುದು, ಆತ್ಮಿಯರ ಒಂದು ಸ್ಪರ್ಶ, ಆ ಸಮಯಕ್ಕೆ ನಮ್ಮ ಹೃದಯದಲ್ಲಿ ಏಳುವ ಯಾವುದೋ ಒಂದು ಛಲವಾಗಿರಬಹುದು, ನಾವು ತೋರುವ ಧೈರ್ಯ, ನಾವು ಕಂಡುಕೊಂಡಂತಹ ಬದುಕು, ನಾವು ತೋರುವ ಬದ್ದತೆ, ನಮ್ಮ ಜೀವನದ ಸಿದ್ದತೆ ಹೀಗೆ ಎಲ್ಲವೂ ಪ್ರೀತಿಯೇ ಆಗಿದೆ ಎಂದರೆ ತಪ್ಪಿಲ್ಲ.

ಪ್ರೀತಿ ಎನ್ನುವಂತಹದ್ದು ಹೇಳದೇ ಅರ್ಥವಾಗುವಂತಹದ್ದು, ಅದೊಂದು ಸುಂದರವಾದ ಕಲ್ಪನೆಗಳು ಜಾಲ, ಅಚ್ಚಳಿಯದೇ ಉಳಿದು ಹೋದ ನೆನಪುಗಳು ಗುಚ್ಚ, ಆಡದೇ ಉಳಿದು ಹೋದ ಮುತ್ತಿನಂತಹ ಮಾತುಗಳ ಸರಪಳಿಯ ಮಾಲೆ. ಶಬ್ದಕ್ಕಿಂತಲೂ ಆಳವಾದ ಭಾವನೆ. ನಮ್ಮವರ ಕಂಡಾಗ ನಮ್ಮ ಕಣ್ಣಂಚಿನಲಿ ಜಿನುಗುವ ನೀರ ಹನಿಯೂ ಅಂತಹ ಮಾಂತ್ರಿಕ ಪ್ರೀತಿಯನ್ನು ಆ ಪ್ರೀತಿಯ ಅಸ್ತಿತ್ವವನ್ನು ಸಾರುತ್ತದೆ. ಅದು ಹೇಳಬೇಕಾಗಿಲ್ಲ, ಅದು ಅರ್ಥವಾಗಬೇಕು. ನಾವು ತೋರುವ ಒಂದು ಚಿಕ್ಕ ಕಾಳಜಿಯಲ್ಲಿ, "ಟೇಕ್ ಕೇರ್" ಎನ್ನುವ ಒಂದು ಮೆಸ್ಸೇಜ್ ನಲ್ಲಿ, ಅಪ್ಪ ತೋರುವ ಕೋಪದಲ್ಲಿ, ಅಮ್ಮನ ಮಡಿಲಲ್ಲಿ, ಅವಳ ಕಣ್ಣಿನಾಳದಲ್ಲಿ, ಸತಿಪತಿಗಳ ಆಲಿಂಗನದಲ್ಲಿ, ಸ್ನೇಹಿತರ ಅಪ್ಪುಗೆಯಲ್ಲಿ, ಸಹೋದರಿಯ ಹಾರೈಕೆಯಲ್ಲಿ, ಹಿರಿಯರ ಬೆನ್ನುತಟ್ಟುವಿಕೆಯಲ್ಲಿ ಅವರಾಡುವ ಮಾತುಗಳಲ್ಲಿ, ತೋರುವ ಕಾಳಜಿಯಲ್ಲಿ, ಸಂತೈಸುವ ರೀತಿಯಲ್ಲಿ, ಸಹಕರಿಸುವ ಮಾರ್ಗದಲ್ಲಿ ಪ್ರೀತಿಯೇ ಅಡಗಿದೆ. ಆ ಪ್ರೀತಿಯ ಪರಾಕಾಷ್ಠೆಯ ಫಲವೇ ನಮ್ಮೆಲ್ಲ ಸಾಧನೆಗೆ ಮೆಟ್ಟಿಲುಗಳಾಗಿ ನಿಂತಿದೆ.

ಈ ಪ್ರೀತಿ ಒಂತರಾ ಜೀವದ್ರವ ಇದ್ದಹಾಗೆ, ನಮ್ಮಗಳ ನೋವಿನಲ್ಲಿ ನಮ್ಮ ಕೈ ಹಿಡಿಯುವಂತಹ ಆತ್ಮೀಯ ಸ್ನೇಹಿತನಿದ್ದಂತೆ, ನಮ್ಮ ಸಂತೋಷದಲ್ಲಿ ನಮ್ಮ ಗೆಲುವಿನಲ್ಲಿ ನಮಗೆ ತೋರುವ ನಿಷ್ಠೆ, ನಮ್ಮ ಹರ್ಷವನ್ನು ಇಮ್ಮಡಿಗೊಳಿಸುವ ಆತ್ಮ ಸ(ಖಿ)ಖನಿದ್ದಂತೆ, ನಮ್ಮದಲ್ಲದ, ನಮಗೊಪ್ಪದ ನಮ್ಮ ಅತೀ ಕಷ್ಟದ ಕ್ಷಣಗಳಲ್ಲಿ, ಡೋಂಟ್ ವರಿ "ನಾನು ಇದ್ದೀನಿ" ಎಂದು ಕೇಳಬಯಸುವ ಆ ಆಪ್ತ ನುಡಿಗಳ ಹಿಂದಿನ ಶಕ್ತಿಯೇ ಈ ಪ್ರೀತಿ. ಯಾಕೋ ಈ ದಿವಸ ನನಗೆ ಅತಿಯಾದ ಬೇಸರ ಎನ್ನುವಂತಾದಾಗ "ನಡೆಯೋ ಮರಾಯ ಬರೀ ಇದೇ ಆಯ್ತು ನಿಂದು" ಎನ್ನುವ ಆ ಅಧಿಕಾರಯುತ ದ್ವನಿಯಲ್ಲಿನ ಕಾಳಜಿ ಇದೆಯಲ್ಲ ಅದು ಪ್ರೀತಿಯ ನಿಜವಾದ ಸ್ವರೂಪ. ಕಾಲಕಾಲಕ್ಕಲ್ಲದಿದ್ದರೂ ಅತಿ ಅನಿವಾರ್ಯ ಎನಿಸಿದಾಗ, ಘಟಿಸಬಾರದ ಘಟನೆಯೊಂದು ನೆಡೆದು ಹೋದಾಗ, ಆಕಾಶವೇ ತಲೆಯಮೇಲೆ ಕಳಚಿ ಬಿದ್ದಂತಹ ಸಮಯದಲ್ಲಿ, "ಮುಂದೇನೂ ತಿಳಿಯವಲ್ದು ಏನು ಮಾಡ್ಲಿ" ಎನ್ನುವ ಆತಂಕದ ಸಂದರ್ಭದಲ್ಲಿ ತಕ್ಷಣಕ್ಕೆ ಓ.. ಅವ(ಳು)ನಿದ್ದಾನಲ್ಲ ಎನ್ನುವ ಆ ಸಮಾದಾನಕರ ಬಾವನೆಯೊಂದನ್ನು ಉಂಟುಮಾಡುವ ಜಾಗ್ರತ ಆಶಾಕಿರಣವೊಂದು ಹೊಳೆಯುತ್ತದೆಯಲ್ಲ ಅದರ ಹಿಂದಿರುವ ಆ ಶಕ್ತಿಯೇ ಪ್ರೀತಿ...!

ಒಂದು ಕಣ್ಣೋಟ, ಒಂದು ಮುಗುಳು ನಗೆ, ಒಂದು ಪ್ರೀತಿ ಮತ್ತು ಕಾಳಜಿ ತುಂಬಿದ ಅಪ್ಪುಗೆ, "ಲವ್ ಯು ಡಿಯರ್" ಎನ್ನುವ ಮೂರಕ್ಷರ, ನಿಮ್ಮ ನೋವುಗೆ ಆಸರೆಯಾಗುವುದು, ನಿಮ್ಮ ಸಂತೋಷದಲ್ಲಿ ನಿಮ್ಮ ಗೆಲುವಿಗೆ ನ್ಯಾಯ ಒದಗಿಸುವುದು, ಹೀಗೆ ತನ್ನದೆಯಾದ ವಿವಿಧ ಒಳಸೆಳತವನ್ನು ಒಸರುವುದೇ ಪ್ರೀತಿಯಾಗಿ ಪ್ರತಿಫಲಿಸುತ್ತದೆ. ನಿಮ್ಮ ಇರುವಿಕೆಯ ಜೊತೆ ಜೊತೆಗೆ, ನಿಮ್ಮ ಅನುಪಸ್ಥಿತಿಯಲ್ಲಿ ನಿಮ್ಮವರನ್ನು ಕಾಡುವ, ಅವನಿರಬೇಕಿತ್ತು... ಎನ್ನುವ ಬಾವ ಜಾಗ್ರತೆಗೆ ಕಾರಣವಾದ ಆ ಅಂಶವೇ ಈ ಪ್ರೀತಿಯಾಗಿದೆ.

ಅಮ್ಮನೊಡಲ ಬಿಸಿ ಅಪ್ಪುಗೆಯಂತೆ, ಹಸಿದ ಒಡಲಿಗೆ ಅಮೃತದಂತೆ ಈ ಪ್ರೀತಿ. ಹುಸಿಕೋಪ, ಒಣ ಜಂಬ, ಹಸಿ ಬಿಸಿ ಬಣ್ಣ ಬಣ್ಣದ ಕನಸುಗಳು, ಮತ್ತೊಬ್ಬರ ಬಗ್ಗೆ ತೆಗೆದುಕೊಳ್ಳುವ ಕಾಳಜಿ, ಹೊಣೆಗಾರಿಕೆ, ಪ್ರತಿ ಸಮಯದಲ್ಲೂ ಒಂದಿಲ್ಲೊಂದು ರೀತಿಯಲ್ಲಿ ಒಬ್ಬರು ಮತ್ತೊಬ್ಬರಿಗಾಗಿ ನಿಲುಕುವುದಿದೆಯಲ್ಲ ಅದೇ ಪ್ರೀತಿ. ಅವನ/ಳ ಪ್ರತೀ ಹೆಜ್ಜೆಯಲ್ಲೂ "ಐ ಯಾಮ್ ವಿತ್ ಯು" ಎನ್ನುವುದಿದೆಯಲ್ಲ ಅದುವೇ ನಿಜ ಪ್ರೀತಿಯ ಸ್ವರೂಪ. ಒಂದರ್ಥ ದಲ್ಲಿ ಪ್ರೀತಿ ಎಂದರೆ ಪ್ರತೀ ಕ್ಷಣದಲ್ಲೂ ಒಂದು ಕಡೆಯಿಂದ ಮತ್ತೊಂದೆಡೆಗೆ, ಒಬ್ಬರಿಂದ ಮತ್ತೊಬ್ಬರಿಗೆ ನಿತ್ಯ ನಿರಂತರವಾಗಿ ಪ್ರತಿಯೊಬ್ಬರ ಹೃನ್ಮನಗಳನ್ನು ಆದ್ರಗೊಳಿಸುತ್ತಾ ಜಗದಗಲ, ಭುವಿಯಗಲ, ಬಾನಗಲ ಅನುರಣಿಸುತ್ತ ಗುಪ್ತವಾಗಿ ಪ್ರವಹಿಸುವ ಗುಪ್ತಗಾಮಿನಿಯೇ ಆಗಿದೆ. ಅಂತಹ ಪ್ರೀತಿಯ ವಿವಿಧ ರೂಪಗಳನ್ನು ಅನುಭವಿಸುತ್ತ ಅನವರತ ನಮಗೆದುರಾದ ಪ್ರತಿಯೊಬ್ಬರಿಗೂ ಅದನ್ನೇ ಹಂಚುತ್ತಾ ಆ "ಪ್ರೀತಿಯ ಅಸ್ತಿತ್ವವನ್ನು ಸಂಭ್ರಮಿಸೋಣ ಬನ್ನಿ".


# 'ಚರಿತ್ರೆಯ ಹುಡುಕಾಟ'ಕ್ಕೊಂದು ಮಾರ್ಗದರ್ಶಿ

ಇತಿಹಾಸ ಎಂದರೆ ಎಲ್ಲರೂ ಮೂಗು ಮುರಿಯುವವರೇ. ಅದೊಂದು ಸತ್ತವರ ಕತೆ, ಆಗಿ ಹೋದ ಘಟನೆಗಳ ಸರಮಾಲೆ, ಕೇವಲ ಇಸ್ವಿಗಳು ಅಥವಾ ಅಂಕಿ-ಅಂಶಗಳ ದಾಖಲೆ, ಹೀಗೆ ವಿವಿಧ ಕಾರಣಗಳಿಗೆ ನಿರ್ಲಕ್ಷಿತವಾದ ವಿಷಯ. ಆದರೆ ಅದು ಭೂತ ಮತ್ತು ವರ್ತಮಾನದ ನಡುವೆ ನೆಡೆಯುವ ನಿರಂತರ ಸಂವಾದ. ಈ ಸಂವಾದದ ಫಲವು ಭವಿಷ್ಯಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳಲು ಅನುವುಮಾಡಿಕೊಡುತ್ತದೆ.

ಭೂಮಿ ಉಗಮವಾಗಿ, ಭೂಮಿಯ ಮೇಲೆ ಮಾನವ ಜೀವ ತಳೆದಾಗಿನಿಂದಲೂ ಮಾನವನ ನೆಲೆಗಳು, ಅವನ ಪ್ರತಿ ಚಟುವಟಿಕೆಗಳನ್ನು ಅಧ್ಯಯನಕ್ಕೊಳಪಡಿಸಲಾಗುತ್ತಿದೆ. ಮಾನವ ಸಂಬಂಧಿತ ಚಟುವಟಿಕೆಗಳ ಅಧ್ಯಯನವೇ ಇತಿಹಾಸ. ಇಂತಹ ಅಮೂಲ್ಯ ಘಟನೆಗಳು ಇಂದಿನ ಯುವ ಪೀಳಿಗೆಗೆ ಅವಶ್ಯಕ. ಇತಿಹಾಸ ತಿಳಿಯದವರು ಇತಿಹಾಸ ಸೃಷ್ಟಿಸಲಾರರು ಎಂಬ ಮಾತಿದೆ. ಅಂದರೆ ಪ್ರತಿಯೊಬ್ಬರ ಸಾಧನೆಗೂ ಇತಿಹಾಸದ ಅಧ್ಯಯನ ಅಗತ್ಯವಿದೆ.


ಇತಿಹಾಸದ ಅಧ್ಯಯನಕ್ಕೆ ಸುಲಭವಾಗಿ ದೊರೆಯುವ ಪುಸ್ತಕಗಳೆಂದರೆ ಪಠ್ಯಪುಸ್ತಕಗಳು ಅಥವಾ ವಿಶ್ವವಿದ್ಯಾಲಯಗಳು ಪ್ರಕಟಿಸಿದ ಸಂಶೋಧನಾ ಬರಹಗಳ ಪುಸ್ತಕಗಳು. ಆದರೆ ಇವುಗಳ ಆಚೆ ಅಲ್ಲಲ್ಲಿ ಕೆಲ ಇತಿಹಾಸ ತಜ್ಞರು, ಪ್ರಾಧ್ಯಾಪಕರುಗಳು ಬರೆದ ಲೇಖನಗಳು ಅಥವಾ ಪುಸ್ತಕಗಳು ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತಾ ಬಂದಿವೆ. ಅಂತಹ ಇತಿಹಾಸ ಲೇಖಕರ ಸಾಲಿನಲ್ಲಿ ನಿಲ್ಲಬಲ್ಲ ಮತ್ತೊಬ್ಬ ಇತಿಹಾಸ ಉಪನ್ಯಾಸರೆಂದರೆ ಶ್ರೀಮತಿ ರೇಖಾ ಪಾಟೀಲ್ ಅವರು. ಮೂಲತಃ ರಾಯಚೂರು ಜಿಲ್ಲೆಯವರಾದ ರೇಖಾ ಪಾಟೀಲ್ ಅವರು ಇತಿಹಾಸದ ಬರಹಗಳ ಮೂಲಕ ತಮ್ಮದೇ ಆದ ಓದುಗರ ಬಳಗವನ್ನು ಸೃಷ್ಟಿಸಿದವರು. ಬೇರೆ ಬೇರೆ ಸಂದರ್ಭಗಳಲ್ಲಿ ಅವರು ಬರೆದ ಇತಿಹಾಸದ ಲೇಖನಗಳನ್ನು ಒಟ್ಟುಗೂಡಿಸಿ ಓದುಗರಿಗೆ ಒಂದೆಡೆ ಕೊಡುವ ಸಲುವಾಗಿ 'ಚರಿತ್ರೆಯ ಹುಡುಕಾಟ' ಎಂಬ ಕೃತಿಯನ್ನು ಹೊರತಂದಿದ್ದಾರೆ.




ಈ ಕೃತಿಯಲ್ಲಿ ಇಪ್ಪತ್ತು ಅಮೂಲ್ಯ ಲೇಖನಗಳಿವೆ. ಓದುಗರಿಗೆ ಅನುಕೂಲವಾಗುವಂತೆ ಅವುಗಳನ್ನು ಎರಡು ಭಾಗಗಳಲ್ಲಿ ಹಂಚಲಾಗಿದೆ. ಮೊದಲನೆ ಭಾಗದಲ್ಲಿ ಹೈದರಾಬಾದ್ ಪ್ರಾಂತ್ಯದ(ಈಗಿನ ಕಲ್ಯಾಣ ಕರ್ನಾಟಕ ಪ್ರಾಂತ್ಯ) ಇತಿಹಾಸಕ್ಕೆ ಸಂಬಂಧಿಸಿದ ಬರಹಗಳಿವೆ. ಲೇಖಕರು ಮೂಲತಃ ರಾಯಚೂರಿನವರಾಗಿದ್ದರಿಂದ ರಾಯಚೂರು ಇತಿಹಾಸಕ್ಕೆ ಹೆಚ್ಚು ಒತ್ತು ಕೊಟ್ಟಿರುವಂತಿದೆ. ಆದಾಗ್ಯೂ ಬಳ್ಳಾರಿ, ಹಂಪಿ, ಕೊಪ್ಪಳ, ಆನೆಗೊಂದಿಗಳಿಗೆ ಸಂಬಂದಿಸಿದ ಕೆಲ ಲೇಖನಗಳೂ ಇಲ್ಲಿವೆ.

ಎರಡನೆಯ ಭಾಗದಲ್ಲಿ ಐತಿಹಾಸಿಕ ಮಹನೀಯರ ಜೀವನಾಧಾರಿತ ಲೇಖನಗಳಿವೆ. ಯುವಪೀಳಿಗೆಯು ಆದರ್ಶದ ವ್ಯಕ್ತಿತ್ವ ರೂಪಿಸಿಕೊಳ್ಳು ಮತ್ತು ಉತ್ತಮ ಭವಿಷ್ಯಕ್ಕೆ ಬೇಕಾದ ಅಗತ್ಯ ಸಿದ್ದತೆಗಳನ್ನು ಮಾಡಿಕೊಳ್ಳುವ ದೃಷ್ಟಿಯಿಂದ ಈ ಭಾಗವು ಅತ್ಯಂತ ಮಹತ್ವದ್ದು ಎನಿಸಿತು. ಇಲ್ಲಿ ಮಹಾತ್ಮ ಗಾಂಧಿಜಿ, ಬಾಬು ಜಗಜೀವನ ರಾಮ್, ಕಸ್ತೂರ್ ಬಾ ಗಾಂಧಿ, ಡಾ. ಬಿ.ಆರ್. ಅಂಬೇಡ್ಕರ್, ಮುಂತಾದ ಮಹನೀಯ ವ್ಯಕ್ತಿತ್ವವನ್ನು ತಿಳಿಸುವ ಲೇಖನಗಳಿವೆ. ತಮ್ಮ ವ್ಯಕ್ತಿತ್ವವನ್ನು ಗಟ್ಟಿಗೊಳಿಸಕೊಳ್ಳಬಯಸುವ ಯುವ ಪೀಳಿಗೆಗೆ ಇವು ಹೆಚ್ಚು ಪ್ರೇರಣೆಯನ್ನು ನೀಡುತ್ತವೆ.



ವಿವಿಧತೆಯಲ್ಲಿ ಏಕತೆಯನ್ನು ಸಾರಿದ ದೇಶ ನಮ್ಮದು. ಕರ್ನಾಟಕವಂತೂ ಭವ್ಯ ಸಂಸ್ಕೃತಿ ಮತ್ತು ಪರಂಪರೆಗಳನ್ನು ಹೊಂದಿದೆ. ಅದರಲ್ಲೂ ಕಲ್ಯಾಣ ಕರ್ನಾಟಕವಂತೂ ಭಾವೈಕ್ಯತೆಗೆ ಪ್ರತೀಕವಾಗಿ ಬೆಳೆದ ಸಾಂಸ್ಕೃತಿಕ ಸಿರಿತನದ ನಾಡಾಗಿದೆ. ಇಂತಹ ಅಮೂಲ್ಯ ನಾಡಿನ ಇತಿಹಾಸವನ್ನು ಇಂದಿನ ಯುವಪೀಳಿಗೆಗೆ ತಿಳಿಸುವ ಉದ್ದೇಶದಿಂದ ಈ ಕೃತಿಯು ಹೆಚ್ಚು ಮಹತ್ವ ಪಡೆಯುತ್ತದೆ.

ಆಧುನಿಕ ಜೀವನಶೈಲಿ ಹಾಗೂ ತಂತ್ರಜ್ಞಾನದ ಸುಳಿಗೆ ಸಿಲುಕಿ ಇಂದಿನ ಯುವಪೀಳಿಗೆ ಹಾಳಾಗುತ್ತಿದೆ ಎಂಬ ಮಾತು ಕೇಳಿಬರುತ್ತಿದೆ. ಮೂಲತಃ ಉಪನ್ಯಾಸಕರಾಗಿರುವ ರೇಖಾ ಪಾಟೀಲ್ ಅವರು ಯುಜನತೆ ಹಾಗೂ ವಿದ್ಯಾರ್ಥಿಗಳ ಅಭ್ಯುದಯದ ಮೇಲೆ ಅಪಾರ ಕನಸನ್ನು ಇಟ್ಟುಕೊಂಡವರು. ಹಾಗಾಗಿ ಅಂತಹ ಯುವ ಪೀಳಿಗೆಗೆ ಇತಿಹಾಸದ ಪ್ರಜ್ಞೆಯನ್ನು ಬೆಳೆಸುವ ಹಾಗೂ ಅವರಲ್ಲಿ ಇತಿಹಾಸ ಅಧ್ಯಯನವನ್ನು ಉದ್ದೀಪನಗೊಳಿಸುವ ನಿಟ್ಟಿನಲ್ಲಿ ರೇಖಾ ಪಾಟೀಲ್ ಅವರ 'ಚರಿತ್ರೆಯ ಹುಡುಕಾಟ' ಪುಸ್ತಕವು ಹೆಚ್ಚು ಮಹತ್ವದ್ದು ಎನಿಸಿದೆ. ಸಾಹಿತ್ಯ, ಸಂಸ್ಕೃತಿ, ಪರಂಪರೆಯ ವೈಚಾರಿಕ ಚಿಂತನೆಗಳನ್ನೊಂಡ ಇಂತಹ ಕೃತಿಗಳು ಓದುಗರಿಗೆ ಹೆಚ್ಚು ಆಪ್ತವಾಗುತ್ತವೆ. ಇಂತಹ ಅಮೂಲ್ಯ ಕೃತಿಯನ್ನು ಕನ್ನಡಿಗರಿಗೆ ಕೊಟ್ಟ ರೇಖಾ ಪಾಟೀಲ್ ಅವರ ಶ್ರಮ ಸಾರ್ಥಕವಾಗಿದೆ ಎಂದೆನಿಸುತ್ತದೆ. ಇಂತಹ ಅಮೂಲ್ಯ ಕೃತಿಯನ್ನು ಓದುವ ಮೂಲಕ ಯುವಕರು ತಮ್ಮ ಜ್ಞಾನವನ್ನು ವಿಸ್ತರಿಸಕೊಳ್ಳಬಹುದು. ಅಂತೆಯೇ ಶಿಕ್ಷಕರು ಹಾಗೂ ಇತಿಹಾಸದ ಆಸಕ್ತಿ ಇರುವವರಿಗೂ ಇದೊಂದು ಆಪ್ತ ಮಾರ್ಗದರ್ಶಿಯಾಗುತ್ತದೆ.

ಪುಸ್ತಕ ಹೆಸರು : ಚರಿತ್ರೆಯ ಹುಡುಕಾಟ
ಲೇಖಕರು : ಶ್ರೀಮತಿ ರೇಖಾ ಪಾಟೀಲ್
ಪುಟಗಳು : 167, ಬೆಲೆ : 150/-
ಪ್ರಕಾಶಕರು : ಕನಿಷ್ಕ ಪ್ರಕಾಶನ ರಾಯಚೂರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಜನಪರ ಧ್ವನಿ ಹಂಪಿ ಟೈಮ್ಸ್

ಸಂಭ್ರಮದ ಹಂಪಿ ಟೈಮ್ಸ್
ವಾರ್ಷಿಕೋತ್ಸವದ ದಿನ
ಸಡಗರದಿಂದ ಅರ್ಪಿಸುವೆ ನನ್ನಯ
ಕಾವ್ಯ ನಮನ
ಪತ್ರಿಕಾ ಬಳಗದ ಅವಿರತ ಶ್ರಮ
ಪ್ರತಿಫಲವಾಗಿ ಕಾಣುತ್ತಿರುವೆವು ಉತ್ಕೃಷ್ಟ
ಬರಹಗಳ ಸಂಗಮ

ಜನಪರ ಧ್ವನಿ ಎತ್ತಿದ ಪತ್ರಿಕೆ
ಓದಿದವರಿಗಾಗುವುದು ಮನವರಿಕೆ
ಮನದ ಭಾವನೆಗೆ ದನಿಯಾದ ವೇದಿಕೆ
ಅನಾವರಣಗೊಳಿಸುತಿದೆ ಲೇಖನ
ಕವನಗಳ ಮಾಲಿಕೆ

ಬೆಳೆಯಲಿ ಮುಗಿಲೆತ್ತರಕ್ಕೆಂದು
ಹಾರೈಸುವೆ ಮನತುಂಬಿ
ಪ್ರೀತಿಯಿಂದ ಕೋರುವೆ
ಶುಭಾಶಯಗಳು ಹೃದಯ ತುಂಬಿ

–ಚೇತನ ಭಾರ್ಗವ, ಬೆಂಗಳೂರು

COLD PRESSED OILS
HEALTH Benefits

- Heart Healthy
- Diabetes Friendly
- Healthy Skin & More
- Hair Fall Control

Nandi Enterprises
C/o HAMPI TIMES
Valmiki Circle, HOSAPETE
9482599089

# ಸಮತೋಲನಕ್ಕೆ ಸಹಕಾರಿ ಯೋಗ

## ಯೋಗವು ಕೇವಲ ದೈಹಿಕ ಆಸನಗಳಲ್ಲ, ಇದು ದೈಹಿಕ, ಮಾನಸಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಸಮತೋಲನ ಕನ್ನಡ ವಿಶ್ವವಿದ್ಯಾಲಯದ ಸಂಗೀತ ಮತ್ತು ನೃತ್ಯ ವಿಭಾಗದ ಮುಖ್ಯಸ್ಥರಾದ ಡಾ.ವೀರೇಶ ಬಡಿಗೇರ ಅಭಿಮತ

■ ಹಂಪಿ ಟೈಮ್ಸ್ ಹೊಸಪೇಟೆ
ಯುವಕರು ತಮ್ಮ ದೈಹಿಕ ಆರೋಗ್ಯಕ್ಕೆ ಹೆಚ್ಚು ಒತ್ತು ನೀಡುತ್ತಿದ್ದು, ಮಾನಸಿಕ ಆರೋಗ್ಯದ ಕಡೆ ನಿರ್ಲಕ್ಷ್ಯ ತೋರುತ್ತಿರುವುದರಿಂದ ಯುವಜನರು ಇತ್ತೀಚಿನ ದಿನಗಳಲ್ಲಿ ಅಕಾಲಿಕವಾಗಿ ಸಾವಿಗೆ ಈಡಾಗುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ ಎಂದು ಕನ್ನಡ ವಿಶ್ವವಿದ್ಯಾಲಯದ ಸಂಗೀತ ಮತ್ತು ನೃತ್ಯ ವಿಭಾಗದ ಮುಖ್ಯಸ್ಥರಾದ ಡಾ.ವೀರೇಶ ಬಡಿಗೇರ ಅಭಿಪ್ರಾಯಪಟ್ಟರು.



ಕನ್ನಡ ವಿಶ್ವವಿದ್ಯಾಲಯದ ನವರಂಗ ಬಯಲು ರಂಗಮಂದಿರದಲ್ಲಿ ಶನಿವಾರ ರಾಷ್ಟ್ರೀಯ ಸೇವಾ ಯೋಜನೆ ಘಟಕ ಹಾಗೂ ಸಂಗೀತ ಮತ್ತು ನೃತ್ಯ ವಿಭಾಗ ಮತ್ತು ಯೋಗ ಅಧ್ಯಯನ ಕೇಂದ್ರದ ಸಹಯೋಗದೊಂದಿಗೆ ವಿಶ್ವಸಂಗೀತ ದಿನಾಚರಣೆ 2025 ಹಾಗೂ ಅಂತಾರಾಷ್ಟ್ರೀಯ ಯೋಗಾ ದಿನಾಚರಣೆ 2025ರಲ್ಲಿ ಅವರು ಮಾತನಾಡಿದರು. ಯೋಗವು ಕೇವಲ ದೈಹಿಕ ಆಸನಗಳಲ್ಲ, ಇದು ದೈಹಿಕ, ಮಾನಸಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಸಮತೋಲನವನ್ನು ಸಾಧಿಸುವ ಒಂದು ಸಮಗ್ರ ಅಭ್ಯಾಸವಾಗಿದ್ದು, ಇನ್ನು ಸಂಗೀತವು ಮಾನವನ ಭಾವನೆ, ಮನಸ್ಥಿತಿ ಮತ್ತು ದೈಹಿಕ ಸ್ಥಿತಿಯ ಮೇಲೆ ಅಗಾಧ ಪ್ರಭಾವ ಬೀರುವ ಒಂದು ಸಾರ್ವತ್ರಿಕ ಭಾಷೆಯಾಗಿದೆ. ಪ್ರಮುಖವಾಗಿ ಯೋಗದೊಂದಿಗೆ ಸಂಗೀತವನ್ನು ಸಂಯೋಜಿಸುವುದು ದೇಹ, ಮನಸ್ಸು ಮತ್ತು ಆತ್ಮಕ್ಕೆ ಸಂಪೂರ್ಣ ಅನುಭವವನ್ನು ನೀಡುತ್ತದೆ. ಯೋಗ ಮತ್ತು ಸಂಗೀತ ಇವೆರಡೂ ಒತ್ತಡದ ಜೀವನಶೈಲಿಯಲ್ಲಿ ಮಾನವನ ಯೋಗಕ್ಷೇಮಕ್ಕೆ ಅತ್ಯಂತ ಪ್ರಮುಖ ಸಾಧನಗಳಾಗಿವೆ. ಇವುಗಳನ್ನು ನಮ್ಮ ದಿನಚರಿಯಲ್ಲಿ ಅಳವಡಿಸಿಕೊಳ್ಳುವುದರಿಂದ ಉತ್ತಮ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಪಡೆಯಬಹುದು ಎಂದು ತಿಳಿಸಿದರು.

ರಾಷ್ಟ್ರೀಯ ಸೇವಾ ಯೋಜನಾ ಘಟಕದ ಸಂಯೋಜನಾಧಿಕಾರಿಗಳಾದ ಡಾ. ಎ. ಶ್ರೀಧರ್ ಅವರು ಮಾತನಾಡುತ್ತಾ ಯೋಗ ಮತ್ತು ಸಂಗೀತ ಎರಡಕ್ಕೂ ವಿಶ್ವಮಟ್ಟದಲ್ಲಿ ವ್ಯಾಪಕ ಮಾನ್ಯತೆ ದೊರೆತಿದೆ. ಇವುಗಳ ಪ್ರಭಾವವು ಕೇವಲ ಸಾಂಸ್ಕೃತಿಕ ಅಥವಾ ಮನರಂಜನಾ ಕ್ಷೇತ್ರಕ್ಕೆ ಸೀಮಿತವಾಗಿಲ್ಲದೆ, ಆರೋಗ್ಯ, ಯೋಗಕ್ಷೇಮ ಮತ್ತು ಅಂತರರಾಷ್ಟ್ರೀಯ ಸಹಕಾರದ ಕ್ಷೇತ್ರಗಳಿಗೂ ವಿಸ್ತರಿಸಿದ ಕೀರ್ತಿ ನಮ್ಮ ರಾಷ್ಟ್ರಕ್ಕೆ ಸಲ್ಲುತ್ತದೆ. ಇನ್ನು ಯೋಗ ಮತ್ತು ಸಂಗೀತ ಎರಡೂ ಮಾನವನ ಜೀವನದ ವಿವಿಧ ಆಯಾಮಗಳ ಮೇಲೆ ಆಳವಾದ ಪ್ರಭಾವ ಬೀರಿವೆ. ಯೋಗ ಮತ್ತು ಸಂಗೀತ ಸಾಂಸ್ಕೃತಿಕ ಶ್ರೀಮಂತಿಕೆ ಮತ್ತು ಮಾನವ ಯೋಗಕ್ಷೇಮಕ್ಕೆ ಅವುಗಳ ಕೊಡುಗೆ ಅಪಾರ ಎಂದು ಹೇಳಿದರು.

ಕಾರ್ಯಕ್ರಮಕ್ಕೂ ಮೊದಲು ವಿಶ್ವಸಂಗೀತ ದಿನಾಚರಣೆ ಹಾಗೂ ಅಂತಾರಾಷ್ಟ್ರೀಯ ಯೋಗಾ ದಿನಾಚರಣೆಯನ್ನು ಸಂಗೀತ ವಿಭಾಗದ ಮುಖ್ಯಸ್ಥರು, ವಿದ್ಯಾರ್ಥಿಗಳು ರಾಷ್ಟ್ರೀಯ ಸೇವಾ ಯೋಜನೆ ಘಟಕದ ಸಂಯೋಜನಾಧಿಕಾರಿ ಹಾಗೂ ಯೋಗ ಅಧ್ಯಯನ ಕೇಂದ್ರದ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಸೇರಿ ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು.

ಈ ಕಾರ್ಯಕ್ರಮದಲ್ಲಿ ಯೋಗ ಅಧ್ಯಯನ ವಿಭಾಗದ ಅಧ್ಯಾಪಕರಾದ ಸಿದ್ದರಾಮೇಶ ಹಾಗೂ ಸಂಶೋಧನಾ ವಿದ್ಯಾರ್ಥಿಯಾದ ಸತೀಶ್‌ಗೌಡ ಕಾರ್ಯಕ್ರಮವನ್ನು ನಿರೂಪಿಸಿದರು, ಅಧ್ಯಾಪಕರಾದ ಕೃಷ್ಣನಾಯಕ್ ಯೋಗ ಅಭ್ಯಾಸ ಮಾಡಿಸಿದರು. ಯೋಗ ವಿದ್ಯಾರ್ಥಿಗಳು ಯೋಗ ಪ್ರದರ್ಶನ ನೀಡಿದರು. ಸಂಗೀತ ವಿಭಾಗದ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಸಂಗೀತ ಕಾರ್ಯಕ್ರಮವನ್ನು ಪ್ರಸ್ತುತಪಡಿಸಿದರು. ಈ ಕಾರ್ಯಕ್ರಮದಲ್ಲಿ ವಿವಿಧ ನಿಕಾಯಗಳ ಡೀನರು, ವಿಭಾಗಗಳ ಮುಖ್ಯಸ್ಥರು, ಅಧ್ಯಾಪಕರು, ಆಡಳಿತ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಶ್ರೀ ನಾಡಪ್ರಭು ಕೆಂಪೇಗೌಡ ಜಯಂತಿಯನ್ನು ಅರ್ಥಪೂರ್ಣ ಆಚರಣೆ: ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ

■ ಹಂಪಿ ಟೈಮ್ಸ್ ಹೊಸಪೇಟೆ
ಶ್ರೀ ನಾಡಪ್ರಭು ಕೆಂಪೇಗೌಡ ಅವರ ಜಯಂತಿಯ ನಿಮಿತ್ತವಾಗಿ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಕೆಂಪೇಗೌಡರ ಜೀವನ ಮತ್ತು ಸಾಧನೆಗಳ ಕುರಿತು ವಿವಿಧ ಸ್ಪರ್ಧೆಗಳನ್ನು ಆಯೋಜಿಸುವ ಮೂಲಕ ಜಯಂತಿಯನ್ನು ಆಚರಣೆ ಮಾಡಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಶನಿವಾರದಂದು ಶ್ರೀ ನಾಡಪ್ರಭು ಕೆಂಪೇಗೌಡ ಅವರ ಜಯಂತಿ ಆಚರಣೆಯ ಪೂರ್ವಭಾವಿ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆವತಿಯಿಂದ ತಾಲೂಕಿನ ಶಿಕ್ಷಣ ಇಲಾಖೆಯ ಮೂಲಕ ವಿವಿಧ ಸ್ಪರ್ಧೆಗಳನ್ನು ಆಯೋಜಿಸಿ ಹಾಗೂ ಕಾರ್ಯಕ್ರಮ ಅನುಷ್ಠಾನಗೊಳಿಸಲು ಪ್ರತಿ ತಾಲೂಕಿಗೆ ಒಂದು ಲಕ್ಷ ರೂಪಾಯಿ ಹಣವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಒಂದು ತಾಲೂಕಿನಲ್ಲಿ ನಾಲ್ಕು ಕಾರ್ಯಕ್ರಮ ಆಯೋಜಿಸಲು ಅವಕಾಶವಿದ್ದು, ಒಂದು ಕಾರ್ಯಕ್ರಮಕ್ಕೆ 25 ಸಾವಿರ ರೂ ನಿಗದಿಪಡಿಸಲಾಗಿದೆ.

ಪದವಿ ಪೂರ್ವ ಕಾಲೇಜು ಹಾಗೂ ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗೆ ಶ್ರೀ ನಾಡಪ್ರಭು ಕೆಂಪೇಗೌಡರ ಕುರಿತು ರಸಪ್ರಶ್ನೆ, ಪ್ರಬಂಧ ಸ್ಪರ್ಧೆ, ಆಶುಭಾಷಣ, ಕವನ ವಾಚನ, ಗಾಯನ ಹಾಗೂ ಚಿತ್ರಕಲಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಜೂ.27 ರಂದು ಆಚರಿಸುವ ಶ್ರೀ ನಾಡಪ್ರಭು ಕೆಂಪೇಗೌಡ ಜಯಂತಿ ಅವರ ಕಾರ್ಯಕ್ರಮದಲ್ಲಿ ಬಹುಮಾನ ವಿತರಿಸಲಾಗುವುದು ಎಂದರು.

ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಸಿದ್ದಲಿಂಗೇಶ ರಂಗಣ್ಣನವರ್ ಹಾಗೂ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಇದ್ದರು.

# ಪ್ರಿಂಟಿಂಗ್ ಪ್ರೆಸ್ ಮಾಲೀಕರು ಕಡ್ಡಾಯವಾಗಿ ಮಾಹಿತಿ ನಮೂದಿಸಿ

■ ಹಂಪಿ ಟೈಮ್ಸ್ ಬಳ್ಳಾರಿ
ನಗರದ ಪ್ರಿಂಟಿಂಗ್ ಪ್ರೆಸ್ ಮತ್ತು ಮೇದಾರ್ ಮಾಲೀಕರು ಕಡ್ಡಾಯವಾಗಿ ತಾವು ಮುದ್ರಿಸುವ ಬ್ಯಾನರ್, ಫ್ಲೆಕ್ಸ್, ಬಂಡಿಂಗ್ಸ್‌ಳಿಗೆ ತಮ್ಮ ಒಡೆಯತನದ ಗುರುತು, ಚಿಹ್ನೆ (ಸಿಂಬಲ್) ನಮೂದಿಸಬೇಕು. ಇಲ್ಲವಾದಲ್ಲಿ ದಂಡವಿಧಿಸಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಬಳ್ಳಾರಿ ಮಹಾನಗರ ಪಾಲಿಕೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ತಿಳಿಸಿದ್ದಾರೆ.

# ಅನ್ನದಾಸೋಹ ಪುನರ್ ಆರಂಭ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಸೂಚನೆ | ಭಕ್ತರಲ್ಲಿ ಇಮ್ಮಡಿಗೊಂಡ ಹರ್ಷ



■ ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ
ಮರಿಯಮ್ಮನಹಳ್ಳಿ ಪಟ್ಟಣಕ್ಕೆ ತುಂಗಭದ್ರ ಜಲಾಶಯದಿಂದ ನೀರುಪೂರೈಕೆಯ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ, ವಿದ್ಯುತ್ ಸಂಪರ್ಕ ಅಳವಡಿಸುವ ಕಾರ್ಯಪೂರ್ಣಗೊಂಡನಂತರ ಚಾಲನೆ ನೀಡಲಾಗುವುದೆಂದು ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದರು.

ಇಲ್ಲಿನ ಶ್ರೀಲಕ್ಷ್ಮಿನಾರಾಯಣಸ್ವಾಮಿ, ಶ್ರೀಆಂಜ ನೇಯಸ್ವಾಮಿ ದೇವಸ್ಥಾನಕ್ಕೆ ಅವರು ಶುಕ್ರವಾರ ಸಂಜೆ ಭೇಟಿ ನೀಡಿ, ದೇವರ ದರ್ಶನಪಡೆದು ನಂತರ ಮಾತನಾಡಿದರು. ನೀರೆತ್ತುವ ಯಂತ್ರಗಳಿಗೆ ವಿದ್ಯುತ್ ಸಂಪರ್ಕದ ಕಂಬಗಳ ಅಳವಡಿಕೆ ಕಾರ್ಯನಡೆದಿದೆ, ಶೀಘ್ರದಲ್ಲೇ ಅದು ಮುಗಿಯಲಿದೆ.

ದೇವಸ್ಥಾನ ನವೀಕರಗೊಂಡಿದ್ದು ವೀಕ್ಷಿಸಲು ಉತ್ಸುಕನಾಗಿದ್ದೆ ಅದನ್ನ ನೋಡಲು ಬಂದಿರುವೆ, ತುಂಬಾ ಶಾಸ್ತ್ರೋಕ್ತವಾಗಿ ನವೀಕರಣ ಗೊಂಡು ಮಾದರಿಯಾಗಿದೆಂದರು.

ಕಳೆದ ಹಲವು ತಿಂಗಳುಗಳಿಂದ ನಿಂತಿದ್ದ ಅಮವಾಸ್ಯೆಯ ಅನ್ನದಾಸೋಹವು, ಇದೇ ಅಮವಾಸ್ಯೆಯಿಂದ ಆರಂಭಿಸಲು ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚಿಸಿದರು. ಅಲ್ಲದೇ ಸರ್ಕಾರಿ ಸಾಂಸ್ಕೃತಿಕ ಕಾರ್ಯಕ್ರಮ, ಉತ್ಸವಗಳಂಥ ಹವುಗಳಿಂದ ಅವಕಾಶ ವಂಚಿತ ಕಲಾವಿದರಿಂದ ಅಮವಾಸ್ಯೆಯ ದಿನ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲು ಸೂಚಿಸಿದರು. ಇದಕ್ಕೆ ಜಿಲ್ಲಾಡಳಿತದ ಸಹಕಾರ ಇರಲಿದೆ ಎಂದರು.

ಉಭಯಸ್ವಾಮಿಗಳ ದೇವಸ್ಥಾನಕ್ಕೆ ರಾಜಗೋಪುರ ನಿರ್ಮಿಸಿ ಕೊಡಲು ಇಲ್ಲಿನ ಭಕ್ತಾಧಿಗಳು ಮನವಿಸಲ್ಲಿಸಿದ್ದಾರೆ. ಈ ಕುರಿತು ಚಿಂತನೆ ನಡೆಸಲಾಗುವುದು. ದಾಸೋಹ(ಪ್ರಸಾದ)ಕ್ಕೆ ಭಕ್ತಾದಿಗಳಿಂದ ದೇಣಿಗೆ ಸಂಗ್ರಹಿಸಲು ಇಲಾಖೆಯಿಂದ ಮನವಿಯ ಫಲಕ ಅಳವಡಿಸಲಾಗುವುದು ಎಂದರು. ಇದೇ ಸಂಧರ್ಭದಲ್ಲಿ ರಾಜಗೋಪುರದ ನೀಲನಕ್ಷೆ ವೀಕ್ಷಿಸಿದರು.

ಇದಕ್ಕೂ ಮುನ್ನ ಶಿಲಾಮಯವಾಗಿ ನವೀಕರ ಗೊಂಡ ದೇವಸ್ಥಾನವನ್ನು ಸತ್ತಲೂ ವೀಕ್ಷಿಸಿದರು ಹಾಗು ಇದೇ ಆವರಣದ ನೀಲಕಂಠೇಶ್ವರ ದೇವಸ್ಥಾನವನ್ನು ಅಭಿವೃದ್ಧಿ ಪಡಿಸಲು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ಇಲಾಖೆಯ ಅಧಿಕಾರಿ ಗಳಿಗೆ ಸೂಚಿಸಿದರು. ಈ ಸಂಧರ್ಭದಲ್ಲಿ ದೇವಸ್ಥಾನ ಅಭಿವೃದ್ಧಿ ಸಮಿತಿಯ ಸದಸ್ಯರು, ಭಕ್ತಾಧಿಗಳು, ಇಲಾಖೆಯ ಅಧಿಕಾರಿಗಳು ಸೇರಿದಂತೆ ಇತರರಿದ್ದರು.

# ಯೋಗದಿಂದ ಆರೋಗ್ಯ ಸುಧಾರಣೆ



■ ಹಂಪಿ ಟೈಮ್ಸ್ ಬಳ್ಳಾರಿ
ಕೇಂದ್ರ ಆಯುಷ್ ಮಂತ್ರಾಲಯ, ರಾಷ್ಟ್ರೀಯ ಆಯುಷ್ ಅಭಿಯಾನ, ಆಯುಷ್ ಇಲಾಖೆ ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ ಮತ್ತು ಬಳ್ಳಾರಿಯ ಸಮಸ್ತ ಯೋಗ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ "ಒಂದು ಭೂಮಿ, ಒಂದು ಆರೋಗ್ಯಕ್ಕಾಗಿ ಯೋಗ" ಎಂಬ ಘೋಷವಾಕ್ಯದೊಂದಿಗೆ ನಗರದ ಕಪ್ಪಗಲ್ ರಸ್ತೆಯ ಶೆಟ್ಟರ ಗುರುಶಾಂತಪ್ಪ ಪದವಿಪೂರ್ವ ಕಾಲೇಜು (ಲಾ ಕಾಲೇಜು ಮೈದಾನ) ಆವರಣದಲ್ಲಿ 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮಕ್ಕೆ ಗಣ್ಯರಿಂದ ಸಸಿಗೆ ನೀರೆರೆಯುವ ಮೂಲಕ ಮತ್ತು ಕೆಲವು ಯೋಗಾಸನಗಳ ಅಭ್ಯಾಸ ಮಾಡುವ ಮೂಲಕ ಚಾಲನೆ ನೀಡಲಾಯಿತು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪಂಚಾಯತ್ ಸಿಇಓ ಮಹಮ್ಮದ್ ಹ್ಯಾರಿಸ್ ಸುಮ್ಮೈರ್, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ., ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಎನ್.ಝುಬೇರ್, ಎಸ್.ಜಿ ಕಾಲೇಜು ಸಂಸ್ಥೆಯ ಅಧ್ಯಕ್ಷ ಹಚ್ಚೊಳ್ಳಿ ಶರಣಬಸವನಗೌಡ, ಜಿಲ್ಲಾ ಆಯುಷ್ ಇಲಾಖೆಯ ಅಧಿಕಾರಿ ಡಾ. ಎಂ.ವಿರುಪಾಕ್ಷ, ವೈದ್ಯಾಧಿಕಾರಿ ಡಾ.ವಿಜಯೇಂದ್ರ ಆಚಾರ್ ಸೇರಿದಂತೆ ಜಿಲ್ಲೆಯ ವಿವಿಧ ಯೋಗ ಸಂಸ್ಥೆಗಳು, ಶಾಲಾ ಮಕ್ಕಳು ಮತ್ತು ಸಾರ್ವಜನಿಕರು ಯೋಗಾಭ್ಯಾಸ ಮಾಡಿದರು.

ಅಂತಾರಾಷ್ಟ್ರೀಯ ಯೋಗ ದಿನವನ್ನು ವಿಶ್ವದಾದ್ಯಂತ ಜೂನ್ 21 ರಂದು ಆಚರಿಸಲಾಗುತ್ತದೆ. ಯೋಗವು ಭಾರತೀಯ ಸಂಸ್ಕೃತಿಯಲ್ಲಿ ಒಂದು ಪುರಾತನ ಅಭ್ಯಾಸವಾಗಿದೆ. ಇದು ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಆರೋಗ್ಯವನ್ನು ಸುಧಾರಿಸಲು ಸಹಾಯ ಮಾಡುತ್ತದೆ.

ಪ್ರತಿದಿನ ಯೋಗಾಭ್ಯಾಸ ಮಾಡುವುದು, ನಮ್ಮ ಆರೋಗ್ಯದ ದೃಷ್ಟಿಯಿಂದ ಬಹಳ ಒಳ್ಳೆಯದು. ಯೋಗವು ಹಲವಾರು ರೋಗಗಳನ್ನು ನಮ್ಮತ್ತ ಸುಳಿಯದಂತೆ ನೋಡಿಕೊಳ್ಳುತ್ತದೆ ಎಂಬುದನ್ನು ಅರಿಯಲಾಯಿತು.

ಇದೇ ವೇಳೆ ಕುರೆಕುಪ್ಪ ಎಸ್.ಆರ್.ಕೆ. ಯೋಗ ಸಂಸ್ಥೆಯ ಮಕ್ಕಳಿಂದ ವಿಶೇಷ ಯೋಗ ಪ್ರದರ್ಶನ ಪ್ರಸ್ತುತ ಪಡಿಸಿದರು ಹಾಗೂ 21 ಯೋಗ ಸಾಧಕರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಯೋಗಭ್ಯಾಸದಲ್ಲಿ ಭಾಗವಹಿಸಿದ ಎಲ್ಲಾ ಯೋಗಾಸಕ್ತರಿಗೆ ಕ್ಯೂಆರ್ ಕೋಡ್ ಮೂಲಕ ನೋಂದಾಯಿಸಿಕೊಂಡು ಭಾಗವಹಿದ ಪ್ರಮಾಣ ಪತ್ರ ಪಡೆದುಕೊಳ್ಳಬಹುದಾಗಿತ್ತು.

ಕಾರ್ಯಕ್ರಮದಲ್ಲಿ ವಿವಿಧ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳು ಹಾಗೂ ಯೋಗಾಸಕ್ತರು ಸಾಮೂಹಿಕ ಯೋಗಾಭ್ಯಾಸದಲ್ಲಿ ಆಸಕ್ತಿಯಿಂದ ಭಾಗವಹಿಸಿದ್ದು ವಿಶೇಷವಾಗಿತ್ತು. ಯೋಗಾಭ್ಯಾಸದಲ್ಲಿ ಭಾಗವಹಿಸಿದ ಯೋಗಾಸಕ್ತರಿಗೆ ಟಿ–ಶರ್ಟ್, ಕ್ಯಾಪ್ ಮತ್ತು ಔಷಧ ಸಸಿಗಳನ್ನು ವಿತರಿಸಲಾಯಿತು.

**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ: ಹೊಸಪೇಟೆ ವಿಭಾಗ; ಹೊಸಪೇಟೆ.**

**(ಇ–ಪ್ರೊಕ್ಯೂರ್‌ಮೆಂಟ್/ಸಂಧಾನದ ಮೂಲಕ)**

ವಿಷಯ:–1) ವಾಣಿಜ್ಯ ಮಳಿಗೆಳಿಗೆ ಇ–ಟೆಂಡರ್ ಪ್ರಕಟಣೆ ಸಂಖ್ಯೆ; 13/2025 ದಿನಾಂಕ:19.06.2025
2) ತನಿಖಾ ಕಾರ್ಯಕ್ಕೆ ಲಘು ವಾಹನಗಳು ಮ್ಯಾನುವಲ್ ಸಂಧಾನ ಪ್ರಕಟಣೆ ಸಂಖ್ಯೆ14/2025 ದಿ19.06.2025
3) ವಿಭಾಗದಲ್ಲಿ ಖಾಲಿಯಿರುವ ಜಾಹೀರಾತು ಸಂಧಾನ ಪ್ರಕಟಣೆ ಸಂಖ್ಯೆ15/2025 ದಿ:19.06.2025

ಕ.ಕ.ರ.ಸಾ.ನಿಗಮ; ಹೊಸಪೇಟೆ ವಿಭಾಗದ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ 44 ವಾಣಿಜ್ಯ ಮಳಿಗೆಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

09 ಜಾಹೀರಾತು ಪ್ಯಾಕೇಜ್‌ಗಳು ಮತ್ತು ವಿಭಾಗದಲ್ಲಿನ ತನಿಖಾ ಕಾರ್ಯಕ್ಕೆ ಲಘು 02 ವಾಹನಗಳನ್ನು ಮೂರು ತಿಂಗಳಿಗೆ ಬಾಡಿಗೆ ಆಧಾರದಲ್ಲಿ ಪಡೆಯಲು ಮ್ಯಾನುವಲ್ ಸಂಧಾನ ಮಾತುಕತೆಗೆ ಆಸಕ್ತದಾರರಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

**ಮಳಿಗೆಗಳ ವಿವರ ಈ ಕೆಳಗಿನಂತೆ ಇರುತ್ತದೆ.**

1)ಖಾಲಿಯಿರುವ ಮಳಿಗೆಗಳು ವಿವರ :–ಹಗರಿಬೊಮ್ಮನಹಳ್ಳಿ ಬಸ್ ನಿಲ್ದಾಣದ 03.ಕಟ್ಟಿದ ಮಳಿಗೆಗಳು ಮತ್ತು, ಹೊಸಪೇಟೆ ಬಸ್ ನಿಲ್ದಾಣದಲ್ಲಿ –02 ಮಳಿಗೆ ದ್ವಿ–ಚಕ್ರ ನಿಲ್ದಾಣದ ಮೇಲ್ಭಾಗದಲ್ಲಿ 25 ಮಳಿಗೆಗಳು, ಮರಿಯಮ್ಮನಹಳ್ಳಿ ಬಸ್ ನಿಲ್ದಾಣ –02 ತೆರೆದ ಸ್ಥಳ ಮಳಿಗೆ, ಚಿಗಟೇರಿ 02 ಮಳಿಗೆಗಳು, ಮೋರಗೇರಿ 01 ಮಳಿಗೆ, ಹರಪನಹಳ್ಳಿ ಬಸ್ ನಿಲ್ದಾಣ 01 ತೆರೆದ ಸ್ಥಳ ಮಳಿಗೆ ಮತ್ತು ಹಡಗಲಿ 02 ಮಳಿಗೆಗಳು, 2)ಖಾಲಿಯಿರುವ ಉಪಹಾರ ಗೃಹ ಮಳಿಗೆಗಳು:– ಮೊರಗೇರಿ, & ಉಜ್ಜಿನಿ ಬಸ್ ನಿಲ್ದಾಣಗಳಲ್ಲಿ ಉಪಹಾರ ಗೃಹ ಮಳಿಗೆಗಳು. 3)3 ತಿಂಗಳಿಗೆ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಒದಗಿಸಲು (ಮ್ಯಾನುವಲ್ ಸಂಧಾನ) 4)ವಿಭಾಗದ ವ್ಯಾಪಿಯಲ್ಲಿ ಖಾಲಿಯಿರುವ 09 ಜಾಹೀರಾತು ಪಾಕೇಜ್‌ಗಳಿಗೆ (ವ್ಯಾನುವಲ್ ಸಂಧಾನ). 5)ಹರಪನಹಳ್ಳಿ ಬಸ್ ನಿಲ್ದಾಣದಲ್ಲಿ ಖಾಲಿಯಿರುವ ಮಾನವ ತೂಕದ ಯಂತ್ರ 1. 6)ಹೊಸಪೇಟೆ ಕೇಂದ್ರ ಬಸ್ ನಿಲ್ದಾಣದಲ್ಲಿ ಖಾಲಿಯಿರುವ ದ್ವಿ–ಚಕ್ರ ನಿಲ್ದಾಣ ಬಿ ಬ್ಲಾಕ್, –01. 7)ಹಡಗಲಿ ಬಸ್ ನಿಲ್ದಾಣದಲ್ಲಿ ಖಾಲಿಯಿರುವ ದ್ವಿ–ಚಕ್ರ ವಾಹನ ನಿಲ್ದಾಣ,–01. 8)ಕೂಡ್ಲಿಗಿ ಬಸ್ ನಿಲ್ದಾಣದಲ್ಲಿ ಖಾಲಿಯಿರುವ ದ್ವಿ–ಚಕ್ರ ನಿಲ್ದಾಣ –01

ಅರ್ಜಿ ಸಲ್ಲಿಸುವ ಆಸಕ್ತದಾರರು ಟೆಂಡರ್ ದಸ್ತಾವೇಜುಗಳನ್ನು/ಷರತ್ತು ನಿಬಂಧನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ "www.kppp.karnataka.gov.in" ಮೂಲಕ ಡೌನ್ ಲೋಡ್ ಮಾಡಿಕೊಳ್ಳಬಹುದು. ಇ–ಪ್ರೊಕ್ಯೂರ್‌ಮೆಂಟ್ ಸೆಲ್‌ನಿಂದ **DSC (Digital Signature Certificate)** ಪಡೆದವರು ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.
(44 ವಾಣಿಜ್ಯ ಮಳಿಗೆಗಳು ಮತ್ತು 09 ಜಾಹೀರಾತು ಪ್ಯಾಕೇಜ್‌ಗಳಿಗೆ ಮತ್ತು ಲಘು ವಾಹನ ಟೆಂಡರ್/ಸಂಧಾನ ತೆರೆಯುವ ದಿನಾಂಕ ಮಾತ್ರ)

| ಸಂಧಾನದ/ಇ–ಟೆಂಡರ್ ಅರ್ಜಿಸಲ್ಲಿಸಲು ಕೊನೆಯ ದಿನಾಂಕ/ಸಮಯ | ಸಂಧಾನದ/ಇ– ಟೆಂಡರ್ ತೆರೆಯುವ ದಿನಾಂಕ/ ಸಮಯ | ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : |
|---|---|---|
| ದಿನಾಂಕ:08.07.2025 ಸಮಯ :17.00 | ದಿನಾಂಕ 10.07.2025 ಸಮಯ 10.30 (ಯಾವುದೇ ತಾಂತ್ರಿಕ ದೋಷ ಇಲ್ಲದಿದ್ದಲ್ಲಿ) | ವಿಭಾಗೀಯ ಕಛೇರಿ, ಕಕರಸಾನಿಗಮ ಹೊಸಪೇಟೆ 7760992302/7760992314 |

ಮೇಲಿನಂತೆ ಆಹ್ವಾನಿಸಲಾದ ಇ–ಟೆಂಡರ್/ಸಂಧಾನದಲ್ಲಿ ಭಾಗವಹಿಸಿ ಬೇಡಿಕೆ ಸಲ್ಲಿಸಿದ ಬಿಡ್ಡುದಾರರನ್ನು ಆಯ್ಕೆ ಮಾಡುವ/ಬೇಡಿಕೆಯನ್ನು ತಿರಸ್ಕರಿಸುವ, ಅಥವಾ ಯಾವುದೇ ಸಮಯದಲ್ಲಿ ಪ್ರಕಟಣೆಯನ್ನು ಮುಂದೂಡುವ, ರದ್ದುಪಡಿಸುವ, ಮಾರ್ಪಾಡು ಮಾಡುವ ಅಧಿಕಾರವನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

ಸಹಿ/–ವಿಭಾಗೀಯ ನಿಯಂತ್ರಣಾಧಿಕಾರಿ,
ಕಕರಸಾ ನಿಗಮ ಹೊಸಪೇಟೆ

ವಾ.ಸಾ.ಸಂ.ಇ/ವಿಜಯನಗರ/2025–26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/110

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ವಿಶ್ವಾವಸು

**22–06–2025 – ಭಾನುವಾರ**

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಭರಣಿ |
| ಯೋಗ | : ಸುಕರ್ಮ |
| ಕರಣ | : ಕೌಳವ |
| ಸೂರ್ಯೋದಯ | : 05:43:30 |
| ಸೂರ್ಯಾಸ್ತ | : 19:14:31 |
| ರಾಹು ಕಾಲ | : 17:33–19:15 |
| ಯಮಘಂಡ ಕಾಲ | : 12:29–14:10 |
| ಗುಳಿಕ ಕಾಲ | : 15:52–17:33 |

## ತುಂಗಭದ್ರಾ ನೀರಿನ ಮಟ್ಟ



ಶನಿವಾರ : 21–06–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1612.09 ಅಡಿ |
| ಒಳ ಹರಿವು | 38007 ಕ್ಯುಸೆಕ್ |
| ಹೊರ ಹರಿವು | 193 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 41.856 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1582.32 ಅಡಿ |
| ಒಳ ಹರಿವು | 831 ಕ್ಯುಸೆಕ್ |
| ಹೊರ ಹರಿವು | 1802 ಕ್ಯುಸೆಕ್ |
| ಸಾಮರ್ಥ್ಯ | 5.699 ಟಿಎಂಸಿ |

# ಹಂಪಿ ಟೈಮ್ಸ್ 2ನೇ ವಾರ್ಷಿಕೋತ್ಸವದ ಸಂಭ್ರಮದಲ್ಲಿ ಕಚೇರಿಗೆ ಆಗಮಿಸಿ ಹರಸಿ ಹಾರೈಸಿದ ಗುರು ಹಿರಿಯರು










ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
HAMPI TIMES VIJAYANAGARA
HAMPI TIMES
Print & Digital Kannada Daily

ಹಂಪಿ ಟೈಮ್ಸ್ ಸಮಸ್ತ ಓದುಗರಿಗೆ
ಅನಂತ ಧನ್ಯವಾದಗಳು
1,35,000 + ಡಿಜಿಟಲ್ ಓದುಗರು!

ಹಂಪಿ ಟೈಮ್ಸ್ ಡಿಜಿಟಲ್ ಓದುಗರು

| ಬೆಂಗಳೂರು | ವಿದೇಶ | ಹೊರರಾಜ್ಯ | ಯೂಸರ್ ಎಂಗೇಜ್ |
|---|---|---|---|
| 50,000 + | 2,000 + | 11,000 + | 1,85,000 + |




ವಿಜಯನಗರ ಜಿಲ್ಲೆಯ ಹೆಮ್ಮೆಯ
ಹಂಪಿ ಟೈಮ್ಸ್ ಕನ್ನಡ ದಿನಪತ್ರಿಕೆಗೆ ಆರಂಭದಿಂದಲೂ ಪ್ರೋತ್ಸಾಹಿಸಿ,
ಬೆಂಬಲಿಸಿದ ಸರ್ವರಿಗೂ ಹೃದಯಪೂರ್ವಕ ಕೃತಜ್ಞತೆಗಳು.

Hampi Times E-Paper Daily Readers @ : Karnataka, Maharastra, Kerala, Telangana, Tamilnadu, Andrapradesh, Uttar Pradesh, Gujarat, Haryan, Odisha and other places. : US , UK, Australia, Sweden , Canada Etc..

www.hampitimes.com / https://epaper.hampitimes.com
Email: hampitimes@gmail.com



ಬಸಾಪುರ ಬಸವರಾಜ
ಸಂಪಾದಕ, ಹಂಪಿ ಟೈಮ್ಸ್ ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ

Contact for Advertisement place : 94825 99089 / 94486 33038